॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. 33 No. 07 MAY 2024 Pages 16 Rs. 2/-



Received Donation of Rs. 1,00,001/- from Smt. Vidya & Shri G. V. Hegde, Mulund
in the name of his mother Smt. Bhagirati and father Late Shri Venkataraman Hegde, Bhadran-Murur



Received Donation of Rs. 1,00,000/- from Smt. Laxmi Chitrigimath - Khargar
for Havyaka Welfare Trust on the occassion of Havyaka Diamond Jubilee

**FORTHCOMING EVENT : WOMEN CONVENTION**

**on Sunday, 16th June 2024 at Havyakara Sabhagraha, Dipti Solitaire, Ghatkopar (W) Mumbai**

"**Havyaka Sandesha**" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098.

| | |
|---|---|
| ***Hon. Editor*** | : Smt. Amita S. Bhagwat |
| ***Editorial Committee*** | Smt. Shashikala Hegde<br>Smt. Tanuja Hegde<br>Shri Ganesh Bhat<br>Smt. Shailaja Hegde |
| ***Publisher*** | : Vasant Bhat |
| ***Printed at*** | : M/s. Navin Printers<br>Mumbai - 400 016.<br>✆ 2430 8316 |

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.



**Managing Committee for the year 2023-2024**

| | |
|---|---|
| ***President*** | : Shivkumar P. Bhagwat |
| ***Vice - President*** | : Vishnu Bhagwat |
| ***Hon. Gen. Secretary*** | : Vasant Bhat |
| ***Hon. Jt. Secretary*** | : G. V. Hegde |
| ***Hon. Treasurer*** | : Ganesh Bhat |

***Elected Members :***

| | |
|---|---|
| Narayan Akadas | Umesh Hegde |
| Sanjay Bhat | Prakash Bhat |
| Smt. Tanuja Hegde | Prakash Hegde |
| Smt. Shashikala Hegde | N. K. Hegde |
| Ramana Bhat | |

***Co-opted Members :***
Chandrashekhar Joshi, Nagaraj Bhat


*ಸಂಪಾದಕೀಯ*

# ಬತ್ತಿದ ನೀರು ಮತ್ತೆ ಹನಿಯಾಗುವಂತೆ...



ಊರಿನಲ್ಲಿ ಮಳೆಯಾಗಿದೆ ಎನ್ನುವ ಸುದ್ದಿ ಮುಂಬಯಿ ಹವ್ಯಕರಿಗೆ ಅದೇನೋ ಸಂತೋಷ ನೀಡಿತು. ಇಲ್ಲಿ ಆಗಸವನ್ನು ನಿರುಕಿಸಿದಾಗ, ಕಟ್ಟಿದ ಮೋಡ ಸೂರ್ಯನನ್ನು ಮರೆ ಮಾಚಿದ್ದೇನೋ ಹೌದು. ಆದರೆ ಹನಿಯುವ ಲಕ್ಷಣವೇನೂ ಕಂಡುಬರಲಿಲ್ಲ. ಇನ್ನೂ ವೈಶಾಖ ಮಾಸಕ್ಕೆ ಕಾಲಿಡಲಿಲ್ಲ ಆದರೂ 'ಇಂತಹ ಸೆಕೆಯನ್ನು ಎಪ್ರಿಲ್ ತಿಂಗಳಲ್ಲಿ ಕಂಡೇ ಇಲ್ಲ' ಎಂದು ಪದೇ ಪದೇ ಹೇಳುವ ನಮಗೆ ಮಳೆರಾಯ ಮುಂಬೈ ಮೇಲೂ ಕರುಣೆ ತೋರಿಸಬಹುದಿತ್ತು ಎನ್ನುವ ಭಾವನೆ ಮೂಡಿದ್ದು ನಿಜ.

ಅಂದ ಮಾತ್ರಕ್ಕೆ ನಾವು ಮಳೆಗಾಲದಲ್ಲಿ ತುಂಬಾ ಖುಷಿಯಾಗಿರುತ್ತೇವೆ ಎಂದೇನೂ ಇಲ್ಲ. 'ಅಯ್ಯೋ ಹಿಡಿದ ಮಳೆ ಬಿಡಲೇ ಇಲ್ಲ, ಸೂರ್ಯನ ಮುಖ ನೋಡದೆ ಅದೆಷ್ಟು ದಿನಗಳಾದವು' ಎಂದು ಬೇಜಾರುಪಟ್ಟುಕೊಳ್ಳುತ್ತೇವೆ. ಇನ್ನು ಚಳಿಗಾಲ ಬಂದಾಗ 'ಕರಾವಳಿಯಲ್ಲಿ ಚಳಿಗಾಲ ಬಂದಿದೆ ಎಂದೆನಿಸುವುದೇ ಇಲ್ಲ. ಸ್ವೆಟರ್ ಏಕೆ?' ಎಂದು ಮೂಗು ಮುರಿಯುತ್ತೇವೆ.

ಇವೆಲ್ಲ ಹವಾಮಾನದ ಮಾತುಗಳಾದವು. ರಸ್ತೆಯ ಮೇಲೆ ನಡೆಯುವಾಗ ಹೊಂಡ ತಗ್ಗುಗಳಿರುವಂತೆ, ನಿತ್ಯ ಜೀವನಪಥದಲ್ಲೂ ಸಣ್ಣಪುಟ್ಟ ತೊಂದರೆಗಳು ಎದುರಾದರೆ ಬಹಳ ಉದ್ವೇಗಗೊಳ್ಳುತ್ತೇವೆ. ಇನ್ನು ಯಾವ ತೊಂದರೆಯೂ ಇಲ್ಲದೆ ಬದುಕು ಚಲಿಸುತ್ತಿದ್ದರೆ 'ಅದೇ ದಿನಚರಿ ಮಹಾ ಬೋರ್' ಎಂದು ಸಪ್ಪೆಯಾಗುತ್ತೇವೆ. ಒಟ್ಟಿನಲ್ಲಿ ಸರಕಾರದ ವಿರೋಧಿ ಪಕ್ಷದ ನಾಯಕರಂತೆ ಜೀವನದ ಬಗ್ಗೆ ನಾವು ನಕಾರಾತ್ಮಕವಾದ ನಿಲುವನ್ನು ತಾಳುತ್ತೇವೆ. ಗೊಣಗಾಡಲು ಏನಾದರೂ ಕಾರಣ ಬೇಕಲ್ಲ!

ಈ ನಡುವೆಯೂ ಎಂದೂ ಮುಖ ಸಿಂಡರಿಸದೇ ಕಾರ್ಯತತ್ಪರರಾಗಿರುವ ಹಸನ್ಮುಖಿಗಳು ನಮ್ಮ ಗಮನಸೆಳೆಯುತ್ತಾರೆ. ಹೊರಗಿನ ವಾತಾವರಣ ಹೇಗೇ ಇದ್ದರೂ ಅವರ ಮುಖದಲ್ಲಿ ಏನೂ ಬದಲಾವಣೆಯಾಗದು. ಅವರ ಕೆಲಸದ ಮಗ್ನತೆಗೆ ಭಂಗ ಬರದು.

ವಿಚಾರ ಮಾಡಿದರೆ ಸುತ್ತಮುತ್ತ ಸರಿ ಇಲ್ಲ ಎನ್ನುವ ತಕರಾರು ಆಗಲಿ, 'ಅಯ್ಯೋ ಬೇಜಾರು' ಎನ್ನುವ ಮಾತಾಗಲಿ ಆಲಸ್ಯದ ಸೂಚಕವಾಗಿ ತೋರುತ್ತದೆ. ಎಲ್ಲಿ ಜೀವನ ಪ್ರೀತಿಯಿದೆಯೋ ಅಲ್ಲಿ ಉತ್ಸಾಹವಿರುತ್ತದೆ, ಲವಲವಿಕೆಯಿರುತ್ತದೆ. ಅಂತವರು ಸಮಸ್ಯೆ ಎದುರಾದಾಗ ತಲೆಯ ಮೇಲೆ ಕೈ ಹೊತ್ತು ಕುಳಿತುಕೊಳ್ಳದೆ ಪರಿಹಾರವೇನೆಂದು ಯೋಚಿಸತೊಡಗುತ್ತಾರೆ. ಪರಿಹಾರ ಅವರ ಚೌಕಟ್ಟಿನಲ್ಲಿ ಇಲ್ಲವೆಂದಾದರೆ ವಸ್ತುಸ್ಥಿತಿಯನ್ನು ಒಪ್ಪಿಕೊಂಡು ತಮ್ಮ ಮಾರ್ಗವನ್ನು ಬದಲಿಸಿಕೊಳ್ಳುವ ಚಾಕಚಕ್ಯತೆ, ಜಾಣತನ ಅವರಲ್ಲಿರುತ್ತದೆ.

ಜೀವನ್ಮುಖಿಯಾಗಿರುವವರು ತಮಗರಿಯದಂತೆಯೇ ತಮ್ಮ ಸುತ್ತಮುತ್ತಲಿನ ಪರಿಸರವನ್ನು ಪ್ರಫುಲ್ಲಗೊಳಿಸುತ್ತಾರೆ. ಅಂತವರು ಜೊತೆಗಿದ್ದರೆ ಕೆಲಸ ಮಾಡಲು ಅದೇನೋ ಉತ್ಸಾಹ, ಹುಮ್ಮಸ್ಸು. ಗಗನವೇ ತಲೆಯ ಮೇಲೆ ಬಿದ್ದಂತೆ ಇರುವವರು ಜೊತೆಗಿದ್ದರೆ ಯಾಕೋ ನಮ್ಮ ಚೈತನ್ಯದಲ್ಲಿಯೂ ಏರುಪೇರು.

ಪ್ರತಿದಿನವೂ ಕೂಡ ಸೂರ್ಯೋದಯ ಮತ್ತು ಸೂರ್ಯಾಸ್ತ ಎನ್ನುವ ಕೊಂಡಿಗಳ ನಡುವೆ ಬಂಧಿ. ಅವುಗಳ ನಡುವೆ ಅದೆಷ್ಟೋ ಸಾಧ್ಯತೆಗಳಿವೆ. ಆ ಸಾಧ್ಯತೆಗಳನ್ನು ಸರಿಯಾಗಿ ಬಳಸಿಕೊಂಡರೆ ನಮಗೆ ಇರುಳಲ್ಲಿ ಸುಖ ನಿದ್ದೆ.

ಇತರರನ್ನೂ ಉತ್ತೇಜಿಸುವಂತೆ ನಮ್ಮ ಮನೋಧರ್ಮವನ್ನು ಬೆಳೆಸಿಕೊಳ್ಳೋಣ. ಬೇಸಿಗೆಯಲ್ಲಿ ಬತ್ತಿದ ನೀರು ಮಳೆಯಾಗಿ ಹನಿಯುತ್ತದೆಯಲ್ಲವೇ? ಪ್ರತಿಕೂಲ ಸಮಯದಲ್ಲಿಯೂ ಆಶಾವಾದವನ್ನು ತೊರೆಯದಿರೋಣ.

ಅಮಿತಾ ಎಸ್ ಭಾಗವತ್


e-mail : amitabhagwat@gmail.com


*PAGE DONATED BY :* ***SHRI VINAY & SHRI SANJAY BHAT IN MEMORY OF LATE SMT. GIRIJA & LATE SHRI R. S. BHAT***

# ಮಾಸ ಮಹಾತ್ಮ್ಯ

✍ ಗಣಪತಿ ಭಡ್ತಿ

*(ಕಳೆದ ಸಂಚಿಕೆಯಿಂದ)*

ಕರ್ನಾಟಕ ಪ್ರಾಂತದಲ್ಲಿ ಈ ದಿನ ಭೂಮಿಯನ್ನು ಪೂಜಿಸುವ ರೂಢಿಯಿರುವುದರಿಂದ ಇದಕ್ಕೆ 'ಭೂಮಿಹುಣ್ಣಿವಿ' ಎಂಬ ಹೆಸರಿರುತ್ತದೆ. ಇದಾದರೂ ಪೈರೆಂಬ ಸಂಪತ್ತನ್ನು ಕೊಡುವ ಭೂಮಿಯ ರೂಪಳಾದ ಲಕ್ಷ್ಮಿಯ ಆರಾಧನವೇ ಆಗಿರುತ್ತದೆ. ಈ ಬೆಳೆಯು ಜನರ ಕೈಗೆ ಸೇರ ಹತ್ತುವುದರಿಂದ ಜನರು ಸಂತುಷ್ಟರಾಗಿ ಲಕ್ಷ್ಮೀಪೂಜನ, ಭೂಪೂಜನಗಳನ್ನು ಮಾಡುವುದು ಸ್ವಾಭಾವಿಕವು.

ಅಶ್ವಿನ ಬ. 12ಗೆ ಗೋವತ್ಸ ದ್ವಾದಶಿಯೆನ್ನುವರು. ತುಲ್ಯವರ್ಣದ ಕರುವುಳ್ಳ ಗೋವನ್ನು ಪೂಜಿಸಿ ಉದ್ದಿನ ವಡೆ ಮೊದಲಾದದ್ದನ್ನು ಗೋಗ್ರಾಸವಾಗಿ ಕೊಟ್ಟು ಅದರ ಪಾದದಲ್ಲಿ ತಾಮ್ರ ಪಾತ್ರದಿಂದ ಅರ್ಘ್ಯ ಕೊಡುವುದರಿಂದ ಅಭೀಷ್ಟ ಸಿದ್ಧಿಯಾಗುವುದು. ಈ ದ್ವಾದಶಿಯಿಂದಾರಂಭಿಸಿ ಪೂರ್ವ ರಾತ್ರಿಯಲ್ಲಿ ದೇವತೆಗಳು, ವಿಪ್ರರು, ಗೋವುಗಳು, ಶ್ರೇಷ್ಠರು, ಜ್ಯೇಷ್ಠರು ಮೊದಲಾದವರಿಗೆ ಸ್ತ್ರೀಯರು ನೀರಾಜನ ಮಾಡಬೇಕೆಂದು ಹೇಳಿದೆ, ಈ ಬ.13ಯಿಂದಾರಂಭಿಸಿ ಮೂರು ದಿನಗಳಿಗೆ ಗೋತ್ರಿರಾತ್ರವ್ರತ ವೆನ್ನುವರು.

**ದೀಪಾವಳಿ –** ಅಶ್ವಿನ ಬ. 13 ಯಿಂದಾರಂಭಿಸಿ ಕಾರ್ತಿಕ ಶು. 2ವರೆಗೆ ಐದು ದಿನಗಳಿಗೆ ದೀಪಾವಳಿ ಉತ್ಸವವೆನ್ನುವರು. ಇದು ಹಿಂದುಸ್ಥಾನದಲ್ಲೆಲ್ಲ ಕಡೆಗೂ ಬಹು ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಬ. 13ಯ ದಿನ ಯಮನ ಬಗ್ಗಾಗಿ ಮನೆಯ ಹೊರಗೆ ಮುಸ್ಸಂಜೆಯಲ್ಲಿ ದೀಪ ಹಚ್ಚುವುದರಿಂದ ಅಪಮೃತ್ಯುವು ದೂರಾಗುವದು. ಒಂದು ದಿನ ಯಮಧರ್ಮ ರಾಜನು ತನ್ನ ದೂತರನ್ನು ಕರೆದು 'ನೀವು ಯಮಪಾಶ ಹಾಕಿ ಪ್ರಾಣಹರಣ ಮಾಡುವಾಗ ಯಾರ ಬಗೆಗಾದರೂ ದಯಬಂದಿದ್ದುಂಟೇ?' ಎಂದು ಕೇಳಿದನು. ಅದಕ್ಕೆ ದೂತರು 'ಹೈಮನೆಂಬ ರಾಜನ ಮಗನ ವಿವಾಹವಾಗಿ ನಾಲ್ಕನೆಯ ದಿನ ಸಮಾರಂಭವು ನಡೆದ ಕಾಲಕ್ಕೆ ಸರ್ಪದಂಶದಿಂದ ಆತನು ಮೃತನಾದನು. ಆ ಸಮಾರಂಭದಿಂದ ಆತನನ್ನು ತರುವಾಗ ನಮಗೆ ಬಹಳ ಕನಿಕರವೆನಿಸಿತು; ಇನ್ನು ಯಾರಿಗೂ ಈ ಪ್ರಕಾರ ಆಗದಂತೆ ಮಾಡಬೇಕು' ಎಂದರು. ಇದನ್ನು ಕೇಳಿ ಯಮನು ಆಶ್ವಿನ ಬ. 13ಯಿಂದಾರಂಭಿಸಿ ಐದು ದಿನ ಪ್ರದೋಷಕಾಲದಲ್ಲಿ ಯಾರು ದೀಪೋತ್ಸವಗಳನ್ನು ಮಾಡುವರೋ ಅವರಿಗೆ ಅಪಮೃತ್ಯು ಬರಲಾರದೆಂದು ವರವಿತ್ತನು ಎಂದು ಕಥೆಯಿರುತ್ತದೆ.

ಆಶ್ವಿನ ಬ. 14 ಗೆ ನರಕ ಚತುರ್ದಶಿ ಅನ್ನುವರು. ಈ ಚತುರ್ದಶಿಯು ಚಂದ್ರೋದಯ ವ್ಯಾಪಿನಿಯಾಗಿರಬೇಕು. ಈ ರಾತ್ರಿಯ ಅಂತ್ಯಯಾಮದಿಂದ ಅರುಣೋದಯದವರೆಗಿನ ಕಾಲವು ಮುಖ್ಯವಾದದ್ದು. ಪ್ರಾತಃಕಾಲವು ಗೌಣವಾದದ್ದು. ಈ ಕಾಲದಲ್ಲಿ ತಿಲ, ತೈಲಾದಿಗಳನ್ನು ಮೈಗೆ ಹಚ್ಚಿಕೊಂಡು ಅಭ್ಯಂಗ ಸ್ನಾನ ಮಾಡುವುದರಿಂದ ನರಕಭಯವು ದೂರಾಗುವುದು. ಈ ಅಭ್ಯಂಗ ಸ್ನಾನ ನಂತರ ಕಾರ್ತಿಕ ಸ್ನಾನವನ್ನು ಮಾಡಬೇಕು. ಉಕ್ತಕಾಲದಲ್ಲಿ ಸ್ನಾನವು ಸಂಭವಿಸದಿದ್ದರೆ ಗೌಣಕಾಲದಲ್ಲಾದರೂ ಸ್ನಾನ ಮಾಡಬೇಕು. ಯತಿ ಮೊದಲಾದವರು ಸಹ ಅಭ್ಯಂಗ ಸ್ನಾನ ಮಾಡಬೇಕು. ಈ ಅಭ್ಯಂಗ ಸ್ನಾನಾನಂತರ ಯಮ ತರ್ಪಣ ಮಾಡಬೇಕು; ಎಂದು ವಿಧಿಯಿದೆ.

ಶ್ರೀ ವಿಷ್ಣುವು ವರಾಹಾವತಾರದಿಂದ ಭೂಮಿಯನ್ನು ಉದ್ಧರಿಸುವಾಗ ಅವನ ಸ್ಪರ್ಶದಿಂದ ಭೂಮಿಯಲ್ಲಿ ನರಕಾಸುರನು ಹುಟ್ಟಿದನು. ಇವನು ಭೂಮಿಯ ಮಗನಾದ್ದರಿಂದ ಇವನಿಗೆ ಭೌಮಾಸುರನೆಂದೂ ಹೆಸರು ಬಿತ್ತು.



ಇವನು ಪ್ರಾಗ್ಜ್ಯೋತಿಷವೆಂಬ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದು ಇಂದ್ರನ ಛತ್ರ, ಅದಿತಿಯ ಕುಂಡಲಗಳನ್ನು ಅಮರ ಪರ್ವತದೊಳಗಿನ ಮಣಿಪರ್ವವೆಂಬ ಸ್ಥಾನವನ್ನು ಕದ್ದನು. ಮತ್ತು ದೇವ-ಮಾನವರನ್ನು ಪೀಡಿಸಿ ಹದಿನಾರು ಸಾವಿರ ಸ್ತ್ರೀಯರನ್ನು ತಂದು ವಿವಾಹ ಮಾಡಿಕೊಳ್ಳಬೇಕೆಂದು ಸೆರೆಯಲ್ಲಿಟ್ಟಿದ್ದನು. ಶ್ರೀಕೃಷ್ಣನು ಇದನ್ನೆಲ್ಲ ತಿಳಿದು ಅವನ ಮೇಲೆ ದಂಡೆತ್ತಿ ಹೋಗಿ ಅವನನ್ನು ನಾಶಮಾಡಿ ಆ ಸ್ತ್ರೀಯರನ್ನೆಲ್ಲ ಬಂಧಮುಕ್ತ ಮಾಡಿ ಅದಿತಿಗೆ ಕುಂಡಲವನ್ನು ಕೊಟ್ಟನು. ನರಕಾಸುರನ ನಾಶವಾದದ್ದೂ, ಆನಂತರ ಶ್ರೀಕೃಷ್ಣನು ಮಂಗಲಸ್ನಾನ ಮಾಡಿದ್ದೂ ಈ ಚತುರ್ದಶಿಯ ದಿನವೇ ಆದ್ದರಿಂದ ಇದಕ್ಕೆ ನರಕ ಚತುರ್ದಶಿ ಎಂಬ ಹೆಸರು ಬಂತು. ಈ ದಿನ ಮಂಗಲಸ್ನಾನ ಮಾಡಿದವರಿಗೆ ನರಕ ಭೀತಿಯಿಲ್ಲೆಂದು ಶ್ರೀಕೃಷ್ಣನು ವರವನ್ನಿತ್ತಿರುವನು.

ಆಶ್ವಿನ ಬ. 30 ದಿನ **ಲಕ್ಷ್ಮೀಪೂಜನ** ಮಾಡುವರು. ಈ ದಿನ ಪ್ರಾತಃ ಕಾಲದಲ್ಲಿ ಅಭ್ಯಂಗ, ದೇವಪೂಜಾದಿಗಳನ್ನು ಮಾಡಿ ಅಪರಾಹ್ನದಲ್ಲಿ ಪಾರ್ವಣಶ್ರಾದ್ಧವನ್ನು ಮುಗಿಸಿ ಪ್ರದೋಷಕಾಲದಲ್ಲಿ ದೀಪದಾನ, ಉಲ್ಕಾ ಪ್ರದರ್ಶನ, ಲಕ್ಷ್ಮೀಪೂಜನಗಳನ್ನೂ ಮಾಡಿ ಊಟಮಾಡಬೇಕು. ಬಾಲವೃದ್ಧಾತುರರ ಹೊರತಾಗಿ ಉಳಿದವರು ಈ ದಿನ ಹಗಲು ಊಟ ಮಾಡಬಾರದು. ಈ ದಿನದ ಮಧ್ಯರಾತ್ರಿಯ ನಂತರ ಪಟ್ಟಣದ ಸ್ತ್ರೀಯರು ತಮ್ಮ ತಮ್ಮ ಮನೆಯ ಅಂಗಳಗಳಿಂದ ಅಲಕ್ಷ್ಮಿಯನ್ನು (ಅಂದರೆ ಅಶುಚಿ ಯಾದ ವಸ್ತುಗಳನ್ನು) ಹೊರಗೆ ಹಾಕತಕ್ಕದ್ದು.

ಶ್ರೀ ವಿಷ್ಣುವು ವಾಮನ ರೂಪದಿಂದ ಬಲಿಯನ್ನು ಪಾತಾಳಕ್ಕಟ್ಟಿ ದೇವತೆಗಳನ್ನು ಬಂಧದಿಂದ ಮುಕ್ತ ಮಾಡಿದನು. ಇದರಿಂದ ಲಕ್ಷ್ಮಿಯೂ ಬಂಧಮುಕ್ತಳಾದಂತಾಯಿತು. ಈ ಪ್ರಕಾರ ಅಸುರರಿಂದ ಲಕ್ಷ್ಮಿಯು ಬಿಡುಗಡೆಯಾದ್ದರಿಂದ ದೇವತೆಗಳೂ ಮನುಷ್ಯನೂ ಅವಳ ಸ್ಥಿರವಾಸ್ತವ್ಯವು ತಮ್ಮಲ್ಲಾಗಬೇಕೆಂದು ಈ ದಿನ ಲಕ್ಷ್ಮಿಯನ್ನು ಪೂಜಿಸಿದರು. ಅಂದಿನಿಂದ ಈ ಅಮಾವಾಸ್ಯೆಯ ದಿನ ಲಕ್ಷ್ಮಿಪೂಜೆಯು ಪ್ರಚಾರದಲ್ಲಿ ಬಂತು.

ಅಶ್ವಿನ ಬ. 14 ಯ ದಿನದಿಂದ ಮೂರು ದಿನ ಬಲಿ ರಾಜ್ಯವೆನಿಸು ವದು. ಬಲಿಯ ಹೆಸರಿನಿಂದ ಫಲಗಳನ್ನಿಟ್ಟು ಪೂಜಿಸುವ ರೂಢಿಯಿದೆ. ಈ ಹಬ್ಬವು ಹಿಂದೂ ಜನರ ಎಲ್ಲ ಹಬ್ಬಗಳಲ್ಲಿ ದೊಡ್ಡದು. ಈ ನಾಲ್ಕು ದಿನ ಅಭ್ಯಂಗಸ್ನಾನ, ದೀಪೋತ್ಸವ, ಮೃಷ್ಟಾನ್ನ ಭೋಜನಾದಿಗಳು ನಡೆಯುವವು. ಇದರಿಂದ ಇದಕ್ಕೆ 'ದೊಡ್ಡಹಬ್ಬ'ವೆನ್ನುವ ರೂಢಿ ಸಹ ಇದೆ. ಹುಡುಗರು ಈ ದಿನಗಳಲ್ಲಿ ಹಲವು ತರದ ಆಟಗಳನ್ನಾಡುವರು. ವ್ಯಾಪಾರಿಗಳಲ್ಲಿ ಕೆಲವರಿಗೆ ಈಗ ವರ್ಷಾಂತ್ಯವಾಗುವುದರಿಂದ ಅವರು ತಮ್ಮ ಲೆಕ್ಕವನ್ನು ಮುಗಿಸಿ ಲಕ್ಷ್ಮೀ ಸರಸ್ವತಿಗಳನ್ನು ಪೂಜಿಸುವರು. ಈ ಕಾಲಕ್ಕೆ ಹೊಸ ವಸ್ತ್ರಗಳನ್ನು ಕೊಂಡುಕೊಂಡು ಧರಿಸುವ ರೂಢಿಯಿದೆ. ಈ ಕಾಲವನ್ನು ಆಬಾಲ ವೃದ್ಧ ಸ್ತ್ರೀಪುರುಷರು ಅತ್ಯಾನಂದದಿಂದ ಕಳೆಯುವರು. ಈ ಕಾಲಕ್ಕೆ ಆಪ್ತೇಷ್ಟರು ಪರಸ್ಪರರಲ್ಲಿ ಹೋಗಿ ಊಟ ಉಪಹಾರಗಳನ್ನು ನಡಿಸುವುದರಿಂದ ಪರಸ್ಪರ ಪ್ರೇಮವು ವೃದ್ಧಿಯಾಗುವುದು. ಒಕ್ಕಲತನವೇ ಪ್ರಧಾನವಾದ ಈ ದೇಶದಲ್ಲಿ ಮಳೆಗಾಲವು ಕಳೆದು ಪೈರು ಕೊಯ್ದು ಮನೆಗೆ ತಂದ ಮೇಲೆ ಇಡೀ ವರ್ಷದ ಒಂದು ದೊಡ್ಡ ಕೆಲಸವೇ ಮುಗಿದಂತಾಗುವುದರಿಂದ ಎಲ್ಲ ಜನರು ಈ ಹಬ್ಬವನ್ನಾಚರಿಸಿ ಅತ್ಯಾನಂದ ಹೊಂದುವರು.

**ಸಮಾಪ್ತಂ**

*PAGE DONATED BY :* ***HEGDE HOSPITAL, CHEMBUR,*** *COURTESY :* ***DR. DINESH HEGDE***

# ಮುಂಬೈ ಕನ್ನಡ ಕವಿಗಳು-ಅರವಿಂದ ನಾಡಕರ್ಣಿ

ಡಾ. ಶೈಲಜಾ ಹೆಗಡೆ, ಮುಂಬಯಿ

*(ಕಳೆದ ಸಂಚಿಕೆಯಿಂದ)*

ಕವಿ ಅರವಿಂದ ನಾಡಕರ್ಣಿ ಅವರ ಆಸಕ್ತಿ ಮತ್ತು ಅಭಿರುಚಿ ವ್ಯಾಪಕವಾದುದು. ಸಾಹಿತ್ಯ, ವಿಜ್ಞಾನ, ಇತಿಹಾಸ, ಪುರಾಣ, ತತ್ವಜ್ಞಾನ, ಕಲೆಗಳಲ್ಲಿ ಅವರಿಗಿರುವ ಅಪಾರ ಆಸಕ್ತಿ ಹಾಗೂ ಅವುಗಳ ಅಧ್ಯಯನ ಅವರ ಅನುಭವ ಸಂಪತ್ತನ್ನೂ ಕಾವ್ಯ ಪ್ರಪಂಚವನ್ನೂ ವಿಸ್ತಾರಗೊಳಿಸಿವೆ. ಬ್ರೂಕ್ಸ್, ಮಾರ್ಕ್ಸ್, ಫ್ರಾಮ್, ಡ್ಯೂರಂಟ ಮೊದಲಾದ ಪಾಶ್ಚಾತ್ಯರ ಬರಹಗಳನ್ನು ಓದಿ ಕರಗತ ಮಾಡಿಕೊಂಡ ನಾಡಕರ್ಣಿಯವರ ಕಾವ್ಯದಲ್ಲಿ ಸಮಕಾಲೀನ ಪ್ರಜ್ಞೆ ಓತಪ್ರೋತವಾಗಿದೆ. ತಮ್ಮ ಸುತ್ತಲಿನ ಪರಿಸರದ ಜೀವನಕ್ಕೆ ಸ್ಪಂದಿಸುವ ರೀತಿ, ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಸಾಗುವ ಅವರ ಕಾವ್ಯಕಥನಶೈಲಿ ಅನನ್ಯವಾದುದು. ಕವಿಯಲ್ಲಿ ಸಮಕಾಲೀನತೆಯಂತೆ, ಸರ್ವಕಾಲೀನತೆಯನ್ನೂ ಕಾಣಬಹುದು ಎಂಬುದು ಎಲಿಯೆಟ್ ಮತ. ಅದನ್ನು ಅವರು "ದಿ ಎಕ್ಸಪೆರಿಮೆಂಟ್ ಆಫ್ ಎ ಪೋಯಂ ಈಸ್ ದಿ ಎಕ್ಸಪೀರಿಯನ್ಸ್ ಬೋಥ್ ಆಫ್ ಎ ಮೊಮೆಂಟ್ ಆಂಡ್ ಆಫ್ ಎ ಲೈಫ್ ಟೈಮ್" ಎಂದು ಹೇಳಿದ್ದಾರೆ. ಅರವಿಂದ ನಾಡಕರ್ಣಿ ಅವರ ಕಾವ್ಯದಲ್ಲಿ ಸಮಕಾಲೀನತೆಯನ್ನೂ ಸಾರ್ವಕಾಲಿಕತೆಯನ್ನೂ ಗುರುತಿಸಬಹುದು. ಮಹಾನಗರದಲ್ಲಿ ಸ್ವಾಭಾವಿಕವಾಗಿ ಸಂಭವಿಸುವ ಹಲವಾರು ವಿಕೃತ ಸನ್ನಿವೇಶಗಳು ನಾಡಕರ್ಣಿಯವರ ಕಾವ್ಯದಲ್ಲಿ ಸ್ಫುಟವಾಗಿ ಮೂಡಿಬಂದಿವೆ. 'ನಗರಾಯಣ' ಕಾವ್ಯಸಂಕಲನದ 'ಮುಂಬೈ ಮಹಾತ್ಮೆ' ಕವನದ ಸಾಲುಗಳು ಇದಕ್ಕೆ ಉತ್ತಮ ನಿದರ್ಶನವಾಗಿವೆ.

ಅರಸಿ ಬಂದ ನಿರಾಶ್ರಿತರಾಸೆಗಳಂತೆ
ಗಗನ ತುಂಬಿ ಇಮಾರತು ಸಾಲು
ದುಡಿದು ಅರೆಸತ್ತವರ ಒಡೆದ ಕನಸುಗಳಂತೆ
ಮುರುಕು ಜೋಪಡಿಯ ಸಾಲೇಸಾಲು

ಬೃಹತ್ ಶಹರಗಳಲ್ಲಿ ಗಗನವನ್ನು ಚುಂಬಿಸುವ ದೊಡ್ಡ ದೊಡ್ಡ ಇಮಾರತುಗಳಂತೆ; ಮುರುಕು ಜೋಪಡಿಯ ಸಾಲುಗಳಿಗೂ ಕೊರತೆಯಿಲ್ಲ. ಈ ಮುರಿದ ಜೋಪಡಿಗಳು ಆಶಾಗೋಪುರವನ್ನು ಹೊತ್ತು ಶಹರಕ್ಕೆ ಬಂದ ನಿರಾಶ್ರಿತರ ಒಡೆದ ಕನಸುಗಳಂತೆ ತೋರುತ್ತವೆ. ದುಡಿದು ದುಡಿದು ಅರ್ಧ ಸತ್ತವರ ಕನಸುಗಳು ಎಂಬ ಕವಿಯ ಉತ್ಪ್ರೇಕ್ಷೆಯ ಉದ್ಗಾರ, ನಾಗರಿಕತೆಯ ಅಪಯಶಸ್ಸನ್ನು ಸೂಚಿಸುತ್ತದೆ.

ಯಾಂತ್ರಿಕತೆಯ ಮಬ್ಬಿನಲ್ಲಿ ನಗರಜೀವಿಗಳಿಗೆ ಕಾಲ ಉರುಳಿದ್ದೂ ತಿಳಿಯದಂತಾಗಿದೆ. ಜೀವನ ಸಂಘರ್ಷದಲ್ಲಿ ಕ್ಷಣ ಕ್ಷಣ ಉರುಳಿದ್ದು ಆಯುಷ್ಯ ಕಳೆದದ್ದು ತಿಳಿಯುವುದೇ ಇಲ್ಲ ಎಂಬ ಕಟುಸತ್ಯವನ್ನು ಕವಿ ತಮ್ಮ 'ನಗರಾಯಣ' ಕಾವ್ಯಕೃತಿಯ 'ತಿಳಿಯಲೇ ಇಲ್ಲ' ಕವಿತೆಯ ಸಾಲುಗಳಲ್ಲಿ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಈ ಜಿದ್ದು ಗುದ್ದು ಸದ್ದಿನಲ್ಲಿ
ಯಾವದೋ ಹಣೆಬರಹದ ಹದ್ದಿನಲ್ಲಿ
ದಶದಶಕ ಉರುಳಿದ್ದು
ಆಯುಷ್ಯಗಳು ಕಳೆದದ್ದು
ತಿಳಿಯಲೇ ಇಲ್ಲಾ ಸ್ವಾಮಿ
ಸರ್ವಥಾ ತಿಳಿಯಲೇ ಇಲ್ಲಾ

ಕವಿಯ ಆತ್ಮಶೋಧನೆಯ ಮೇಲಿನ ಸಾಲುಗಳು, ನಾಗರಿಕತೆಯ ಮಬ್ಬಿನಲ್ಲಿ ಸಂಪೂರ್ಣ ನಗರವೇ ಕಾಲಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವ ದೃಶ್ಯವನ್ನು ಚಿತ್ರಿಸುತ್ತವೆ. ಇಂತಹ ಸಜೀವ ಸಾಲುಗಳಲ್ಲಿ ಕವಿಯ ವ್ಯಕ್ತಿಗತ ಅನುಭವಗಳು ಸಾರ್ವತ್ರಿಕ ಸಂಗತಿಗಳಾಗಿ ಪರಿಣಮಿಸುತ್ತವೆ. ಇವುಗಳನ್ನು ಎಲಿಯೆಟ್‌ನ 'ವೇಸ್ಟ್ ಲ್ಯಾಂಡ್'ಗೆ ಹೋಲಿಸಲಾಗಿದೆ. ಡಾ. ಶಾಂತಿನಾಥ ದೇಸಾಯಿ ಅವರು, ನಗರಾಯಣವನ್ನು 'ನಾಡಕರ್ಣಿಯವರ ವೇಸ್ಟ್ ಲ್ಯಾಂಡ್ ಎಂದರೆ ತಪ್ಪಾಗಲಿಕ್ಕಿಲ್ಲ' ಎಂದು ಬಣ್ಣಿಸಿದ್ದಾರೆ. 'ನಗರ ಜೀವಿಯ ಅಸಹಾಯಕತೆಯನ್ನು ನಾಡಕರ್ಣಿ ಪದರು-ಪದರಾಗಿ ಬಿಡಿಸಿ ಹೇಳುತ್ತಾರೆ. ರಚನೆ, ವೈವಿಧ್ಯ, ವಸ್ತು ಧಾಟಿಗಳ ಹೊಂದಾಣಿಕೆ ನಾಡಕರ್ಣಿಯವರ ವೈಶಿಷ್ಟ್ಯ' ಎಂದು ಡಾ.ಹಾ.ಮಾ.ನಾಯಕ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಅಭಿಮನ್ಯುವಿನಂತೆ ಚಕ್ರವ್ಯೂಹದಲ್ಲಿ ನುಗ್ಗಿ ಸಿಲುಕಿಬಿದ್ದ ಕವಿಯ ಹಾಗೂ ಆತ ಪ್ರತಿನಿಧಿಸುವ ಗ್ರಾಮೀಣ ಮೂಲದ ಆದಿ ಸಂಸ್ಕಾರಗಳ ಭಾವಲೋಕವನ್ನು ದಾಟಿಕೊಂಡು ಬಂದ ಆಧುನಿಕ ಮಾನವನ ಅಂತರಂಗದಲ್ಲಿ ಎಬ್ಬಿಸಿದ ವಿಕಾರ ವಿಚಾರಗಳ ಕಲ್ಲೋಲಕ್ಕೆ ಕನ್ನಡಿ ಹಿಡಿದಿದೆ ಈ ಸಂಕಲನ. ಆದ್ದರಿಂದ ಇದು 'ನಾಗರಾಯಣ'. ಬರೇ 'ನಗರಾಯಣ'ವಲ್ಲ" ಎಂಬ 'ನಗರಾಯಣ' ಕಾವ್ಯ ಕೃತಿಯ ಕುರಿತಾದ ಗೌರೀಶ ಕಾಯ್ಕಿಣಿ ಅವರ ಅಭಿಮತವೂ ಗಮನಾರ್ಹವಾದುದು. ನಾಡಕರ್ಣಿಯವರ ಕಾವ್ಯದಲ್ಲಿ ಕಾಲಪ್ರವಾಹಕ್ಕೆ ಮಹತ್ವವನ್ನು ಕೊಟ್ಟಿರುವುದು ಗೋಚರಿಸುತ್ತದೆ. ದೇಹಿ; 'ಕಾಲೋ ಜಗದ್ಭಕ್ಷಕ:', 'ತಿಳಿಯದು'; 'ಕಾಲಃಕ್ರೀಡತಿ ಗಚ್ಛತ್ಯಾಯುಃ', 'ಕೃತಜ್ಞ'; 'ಕಾಲಾಯ ತಸ್ಮೈ ನಮಃ' ಮೊದಲಾದ ಕಾವ್ಯಗಳು ಇದಕ್ಕೆ ಉತ್ತಮ ನಿದರ್ಶನಗಳಾಗಿವೆ.



ಅರವಿಂದ ನಾಡಕರ್ಣಿಯವರು ತಮ್ಮ ಜೀವನದಲ್ಲಿ ಗ್ರಾಮೀಣ ಸಹಜ ಬದುಕನ್ನೂ ಶಹರದ ಯಾಂತ್ರಿಕ ಬದುಕನ್ನೂ ಕಂಡುಂಡವರು. ಅವರು ಹುಟ್ಟೂರು ಹನೇಹಳ್ಳಿಯ ಪ್ರಕೃತಿ ಹಾಗೂ ಮುಂಬೈ ನಗರದ ವಿಕೃತಿ ಎರಡನ್ನೂ ತಮ್ಮ ಕಾವ್ಯದಲ್ಲಿ ಸಮಾನವಾಗಿ ತೂಗಿ ನೋಡಿದ್ದಾರೆ. ಎರಡೂ ಜೀವನ ಕವಿಗೆ ಚಿರಪರಿಚಿತ. ಪ್ರಕೃತಿಯನ್ನು, ಭಾರತೀಯ ಸಂಸ್ಕೃತಿಯನ್ನು ಆರಾಧಿಸುವ ಕವಿ ಮನಸ್ಸು ಅದಕ್ಕೆ ವ್ಯತಿರಿಕ್ತವಾದ ಪಟ್ಟಣದ ವೈಪರೀತ್ಯವನ್ನು ಕಂಡು ಮರುಗಿದೆ. ಸ್ವರ್ಗ ಸದೃಶವಾದ ಗ್ರಾಮೀಣ ಪರಿಸರವನ್ನು ನೆನೆದು, ಅದನ್ನು ತೊರೆದು ನಗರಕ್ಕೆ ಬಂದಿರುವುದು ಇದಕ್ಕಾಗಿಯೇ! ಎಂದು ಕವಿ ಪ್ರಶ್ನಿಸುತ್ತಾರೆ.

ಇದಕ್ಕೇನೆ ಬಂದದ್ದು ಅಷ್ಟು ದೂರಿಂದ,
ಕಲ್ಪವೃಕ್ಷ ನಂದನಗಳಿಂದ, ನಮ್ಮೂರಿಂದ?
ಷಷ್ಠಿ ತೇರೆಳೆದ ಕೆನ್ನೀರ ಕೇರಿಗಳಿಂದ
ಇದಕ್ಕೇನೆ ಬಂದದ್ದು, ಅಷ್ಟು ದೂರಿಂದ,
ಖೇಟ ಖರ್ವಟದಿಂದ ಅಯೋಧ್ಯೆ ಮಿಥಿಲೆಗಳಿಂದ?

ಕವಿಯ ವೈಯಕ್ತಿಕ ಕಳಕಳಿ ಹಾಗೂ ವೇದನೆ ವ್ಯಕ್ತಿಗತ ಪಾತಳಿಯನ್ನು ಮೀರಿ ಸಾರ್ವಕಾಲಿಕವಾದ ವ್ಯಾಪ್ತಿಯನ್ನು ಹೊಂದಿದೆ. ಜೀವನೋಪಾಯಕ್ಕಾಗಿ ನಗರಕ್ಕೆ ವಲಸೆ ಬಂದ ಜೀವಿಗಳ ಸ್ಥಿತಿ-ಗತಿಯನ್ನು ಮೇಲೆ ಉಲ್ಲೇಖಿಸಿದ ಕವಿತೆಯ ಸಾಲುಗಳು ಸಂವಾದಾತ್ಮಕವಾಗಿ ಅನಾವರಣಗೊಳಿಸಿವೆ. ಬದುಕಿನ ಕಟುಸತ್ಯವನ್ನು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆಯುವ ನಾಡಕರ್ಣಿ ಅವರ ಕಾವ್ಯಧೋರಣೆ ಆಶಾವಾದಿಯಾದುದು. ಇದಕ್ಕೆ ಪುಷ್ಟಿಯಾಗಿ, ಅರವಿಂದ ನಾಡಕರ್ಣಿಯವರು,'ಭಾರತೀಯರಾಗಿ ನಾವು ಮಹಾನ್ ಪರಂಪರೆಯ ವಾರಸುದಾರರು ನಿಜ. ಆದರೆ, ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮಹಾ ಪ್ರಾಣಿಯಾಗಿದ್ದ ನಾವು, ನಮ್ಮ ನಡೆನುಡಿಗಳಲ್ಲಿ, ಕ್ಷುದ್ರಬುದ್ಧಿಯ ಅಲ್ಪಪ್ರಾಣಿಗಳಾಗಿದ್ದೇವೆ. ಅಂಥ ಪರಂಪರೆಗೆ ವ್ಯತಿರಿಕ್ತ ಬದುಕನ್ನು ನಡೆಸಿದ್ದೇವೆ. ವೈಯಕ್ತಿಕ, ಸಾಮಾಜಿಕ ಹಾಗೂ ರಾಷ್ಟ್ರೀಯ ನೆಲೆಗಳಲ್ಲಿ ನಮ್ಮ ಸಂಬಂಧಗಳು ವಿಕೃತಗೊಂಡಿವೆ. ಈ ಕಠೋರ ವೈರುಧ್ಯಗಳನ್ನು ಪ್ರತಿಮೆ, ಸಂಕೇತಗಳನ್ನಾಗಿ ಬಳಸಿಕೊಂಡಿದ್ದೇವೆ' ಎಂದು ತಮ್ಮ ಕಾವ್ಯಧೋರಣೆ ಹಾಗೂ ಕಾವ್ಯ ಕೃತಿಗಳ ಕುರಿತು ವಿವರಿಸಿದ್ದಾರೆ.

*(ಮುಂದುವರಿಯುವುದು)*

*PAGE DONATED BY :* ***SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# ಬಾಳೆ ಎಲೆ ಮಹತ್ವ

✍ ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ

ಬಾಳೆ ಎಲೆ ಕೇಳಲು ಅತ್ಯಂತ ಸಾಮಾನ್ಯ ವಸ್ತು ಅಂತ ಅನಿಸಿದರೂ ತಪ್ಪಲ್ಲ. ಉಂಡ ಬಾಳೆಲೆಯಂತೆ ನಿರ್ಲಕ್ಷಿಸಿದರು ಅಥವಾ ದೂರ ಮಾಡಿದರು ಎಂಬ ಮಾತನ್ನು ಕೇಳುತ್ತೇವೆ. ಇಲ್ಲೂ ಊಟದ ನೆನಪು ಆಗೇ ಆಗುತ್ತದೆ.

ಬಾಳೆ ಎಲೆ ಮಹತ್ವ ಇರುವುದೇ ಊಟದ ಸಮಯದಲ್ಲಿ. ಊಟ ಎಷ್ಟು ಮಹತ್ವವೋ, ಬಾಳೆಎಲೆಯೂ ಅಷ್ಟೇ ಮಹತ್ವದ್ದು.

ನಾವೆಲ್ಲ ಚಿಕ್ಕವರಿದ್ದಾಗ ಪ್ರತಿದಿನ ಬೆಳಿಗ್ಗೆ ತೋಟಕ್ಕೆ ಹೋಗಿ ಬಾಳೆಎಲೆ ಕೊಯ್ದು ತರುವುದು ಸಂಪ್ರದಾಯದಂತೆ ನಡೆಯುತ್ತಿತ್ತು. ಕೊಯ್ದಬಾಳೆಯ ಆಯುಷ್ಯವೂ ತೀರಾ ಕಡಿಮೆ ಇರುವುದರಿಂದ, ಪ್ರತಿದಿನ ಈ ಕೆಲಸ. ಸಾಮಾನ್ಯವಾಗಿ, ಹಳ್ಳಿಗಳಲ್ಲಿ ಪ್ರತಿಯೊಬ್ಬರ ಮನೆಯಲ್ಲೂ ಬಾಳೆಗಿಡ ಇದ್ದೇ ಇರುತ್ತಿತ್ತು. ಅಡಿಕೆ ತೋಟದ ಮಧ್ಯೆ ಬಾಳೆ ಸಸಿ ನೆಟ್ಟರೆ ತೋಟ ತಂಪಾಗಿರುತ್ತದೆ ಎಂಬುದು ಒಂದು ಕಾರಣವಾದರೆ ಪ್ರತಿದಿನ ಊಟಕ್ಕೂ ಬಾಳೆ ಬೇಕೇ ಬೇಕು. ಇದು ಎಲ್ಲ ಸಮಯದಲ್ಲೂ ಬಳಕೆಗೆ ಬರುವ ವಸ್ತು.

ಮೊದಲೆಲ್ಲ ಒಟ್ಟು ಕುಟುಂಬಗಳು ಹೆಚ್ಚಾಗಿರುತ್ತಿದ್ದವು ಮತ್ತು ಬಾಳೆಎಲೆ ಕೊಯ್ಯುವ ಕೆಲಸವನ್ನು ಕೆಲವರಿಗೆ ಕೊಡುತ್ತಿದ್ದರು. ಇದಕ್ಕೆ ಕಾರಣ, ಬಾಳೆಎಲೆ ತೆಗೆಯುವುದು ನಾವು ಅಂದುಕೊಂಡಷ್ಟು ಸುಲಭದ ಕೆಲಸವಲ್ಲ. ಇಲ್ಲೂ ಅನುಭವ, ಚಾಣಾಕ್ಷತೆ ಬೇಕು. ಊಟದ ಬಾಳೆ ತೀರಾ ಬೆಳೆದಿರಲೂ ಬಾರದು, ತೀರಾ ಎಳೆಯದೂ ಇರಬಾರದು. ಇನ್ನು, ಬಾಳೆಯಲ್ಲೂ ಹಲವು ಪ್ರಕಾರಗಳಿವೆ. ಎಲ್ಲವೂ ಊಟದ ಬಾಳೆಯಾಗದು. ಅದರ ಕಲ್ಪನೆಯೂ ಇರಲೇಬೇಕು. ಇಲ್ಲ ಅಂದರೆ, ಯಾವುದಾದರೂ ಬಾಳೆಎಲೆಗಳನ್ನು ತಂದು ರಾಶಿ ಹಾಕಿದರೆ, ಅವು ಊಟಕ್ಕಿಂತ ಮೊದಲೇ ಒಡೆದು ಅಥವಾ ಹರಿದು ಹೋಗುತ್ತವೆ. ಇನ್ನು, ಬಾಳೆಕೊಯ್ಯುವಾಗ ವಹಿಸಬೇಕಾದ ಜವಾಬ್ದಾರಿ ಎಂದರೆ, ಬಾಳೆಎಲೆಯ ಮುಂದಿನಭಾಗ 'ಕೊಡಬಾಳೆ' ಆಗಿ, ಮಧ್ಯದ ಭಾಗ 'ಖಂಡಬಾಳೆ' ಆಗಿ, ಕೊನೆಯದ್ದು 'ಶಿಗತೆಬಾಳೆ' ಯಾಗಿ ಪರಿವರ್ತಿತವಾಗಬೇಕು. ಅಂದಾಜು ಎಷ್ಟು ದೊಡ್ಡದಿರಬೇಕು ಎಂಬ ಕಲ್ಪನೆಯೂ ಇರಲೇಬೇಕು. ಕೊಡಬಾಳೆ ಶ್ರೇಷ್ಠವಾದದ್ದು. ಇದನ್ನು ದೇವರಪೂಜೆ, ಪ್ರತಿಷ್ಠೆ, ಹೋಮ-ಹವನ, ಪುರೋಹಿತರಿಗೆ ದಾನ ಕೊಡುವಾಗ ಬಳಸುತ್ತಾರೆ. ಕೆಲ ಧಾರ್ಮಿಕ ಕೆಲಸಗಳಿಗೆ, ಪುರೋಹಿತರು ಇಂತಿಷ್ಟು ಕೊಡಬಾಳೆಬೇಕು ಅಂತ ತಮ್ಮ ಲಿಸ್ಟ್‌ನಲ್ಲಿ ಬರೆದುಬಿಡುತ್ತಾರೆ. ಅದು ಅಷ್ಟೊಂದು ಮಹತ್ವದ ಪಾತ್ರ ವಹಿಸುತ್ತದೆ. ಇನ್ನು, ಮದುವೆ-ಮುಂಜಿ ಮುಂತಾದ ಕಾರ್ಯಕ್ರಮಗಳಲ್ಲೂ, ಆದಷ್ಟು ಹೆಚ್ಚು ಕೊಡಬಾಳೆ ಬಳಸುತ್ತಾರೆ. ಕೊಡಬಾಳೆಯ ಊಟದ ಮಜಕೂರೇ ಬೇರೆ!

ಇಲ್ಲಿ ಇನ್ನೊಂದು ವಿಶೇಷವನ್ನು ಗಮನಿಸಲೇಬೇಕು. ಇಟ್ಟ ಬಾಳೆಎಲೆಯಲ್ಲಿ ತಯಾರಾದ ಖಾದ್ಯಗಳಿಗೂ ಅವರದ್ದೇ ಆದ ಸ್ಥಳ ನಿಕ್ಕಿ ಆಗಿರುತ್ತದೆ. ಅಲ್ಲೇ ಬಡಿಸಿದರೇನೇ ಅದಕ್ಕೊಂದು ಚಂದ. ಉದಾಹರಣೆಗೆ, ಬಾಳೆಎಲೆಯ ಎಡಭಾಗದ ಮೇಲ್ಬದಿಗೆ ಉಪ್ಪು, ಉಪ್ಪಿನಕಾಯಿ, ಕುಸುಂಬರಿ, ಚಟ್ನಿ ಇರಬೇಕು. ಬಲಭಾಗದ ಮೂಲೆಯಲ್ಲಿ ಪಲ್ಯ, ಎಡಬದಿಯ ಮಧ್ಯಭಾಗದಲ್ಲಿ ಚಿತ್ರಾನ್ನ, ಹಪ್ಪಳ, ಸಂಡಿಗೆ, ಅದರ ಪಕ್ಕದಲ್ಲಿ ಅಂದಿನ ವಿಶೇಷ ಭಕ್ಷ್ಯ. ಬಾಳೆಯ ಮಧ್ಯದಲ್ಲಿ ಅನ್ನ. ಇವಿಷ್ಟು ಸರಿಯಾಗಿ ನಡೆದ ಮೇಲೆ ಬಾಳೆಎಲೆ ನೋಡುವುದೇ ಒಂದು ಸಂತೋಷ! ಸರ್ವಾಲಂಕಾರವಾಗಿಟ್ಟ ದೇವರ ಪ್ರತಿಮೆಯಂತೆ ಕಂಗೊಳಿಸುತ್ತದೆ ಬಾಳೆಎಲೆ.



ಊಟಕ್ಕೂ ಮೊದಲು, ಇನ್ನೂ ಒಂದು ಸಂಸ್ಕಾರವಿದೆ. ಕುಯ್ದು ತಂದ ಬಾಳೆಎಲೆಯ ಹಿಂದು ಮತ್ತು ಮುಂದು, ಒದ್ದೆಬಟ್ಟೆಯಿಂದ ಸ್ವಚ್ಛವಾಗಿರಿಸುವುದು, ಬಾಳೆಎಲೆ ಇಟ್ಟ ಕೂಡಲೇ ನೀರು ಕೊಟ್ಟು ಮತ್ತೊಮ್ಮೆ ತೊಳೆದುಕೊಳ್ಳುವ ಅವಕಾಶ. ಅಂದರೆ, ಸ್ವಚ್ಛತೆಗೆ ಪ್ರಾಧಾನ್ಯ.

ಬಾಳೆ ಎಲೆ ಊಟದಲ್ಲಿ 'ಎಡೆಶೃಂಗಾರ' ಎಂಬುದೂ ಇದೆ. ಕೆಲಖಾದ್ಯಗಳು ಅಷ್ಟೊಂದು ಮಹತ್ವವಲ್ಲದಿದ್ದರೂ ಬಡಿಸುವುದು. ಇದಕ್ಕೆ ಬಾಳೆಎಲೆಯಷ್ಟು ಪ್ರಾಶಸ್ತ್ಯ ಇನ್ನಾವುದೂ ಇಲ್ಲ. ಇನ್ನೂ ಒಂದು ಸಂಗತಿ ಮರೆತಿದ್ದೆ. ಊಟಕ್ಕೂ ಮುನ್ನ, ಬಾಳೆಎಲೆಯ ಬಲಭಾಗದ ಮೂಲೆಯಲ್ಲಿ ಸ್ವಲ್ಪ ತುಪ್ಪ ಮತ್ತು ಪಾಯಸ ಬಡಿಸುವ ಸಂಪ್ರದಾಯವೂ ಇದೆ. ಆ ತುಪ್ಪಕ್ಕೆ 'ಅಬಗಾರ' ಎಂಬ ನಾಮಕರಣ! ಇದು ಆರೋಗ್ಯದ ದೃಷ್ಟಿಯೂ ಹೌದು. ಬಾಳೆ ಎಲೆ ಊಟ ಬಲ್ಲವರೇ ಬಲ್ಲರು ಎಂಬುದೂ ಇದಕ್ಕಾಗಿಯೇ. ಪಂಕ್ತಿಯಲ್ಲಿ ಕುಳಿತು, ಒಟ್ಟಾಗಿ, ಒಂದರ ನಂತರ ಒಂದು ಖಾದ್ಯದ ಬರುವಿಕೆ, ಅವುಗಳ ಸವಿ ಸವಿಯುವಾಗ ಬಾಳೆಎಲೆಯೂ 'ಧನ್ಯೋಸ್ಮಿ' ಅಂದೀತು !

ಇಂದೂ ಕೆಲ ಹೊಟೇಲ್‌ಗಳಲ್ಲಿ 'ಬಾಳೆಎಲೆ ಊಟ ಲಭ್ಯ' ಎಂಬ ಫಲಕ ಕಾಣುತ್ತೇವೆ. ಅದು ಮತ್ತೆ ಬಾಳೆಎಲೆಯ ಮಹತ್ವವನ್ನೇ ಸಾರುತ್ತದೆ.

ಬಾಳೆಎಲೆಯ ಇನ್ನೊಂದು ಮಹತ್ವ ಎಂದರೆ, ಒಮ್ಮೆ ಊಟ ಮಾಡಿದ ಬಾಳೆಯನ್ನು ಮರುಬಳಸುವುದಿಲ್ಲ. ಇದು ಆರೋಗ್ಯದ ದೃಷ್ಟಿಯಿಂದಲೂ ಒಳಿತು. ಊಟವಾಯಿತೆಂದರೆ, ಬಾಳೆಎಲೆ ಆಯುಷ್ಯಪೂರ್ತಿ! ಆದರೂ ಇರುವಷ್ಟುಕಾಲ ಅದೆಷ್ಟು ಹಿತಕಾರಿ ಕೆಲಸ ಮಾಡುತ್ತದೆ ಎಂಬುದನ್ನು ನಾವು ಮನುಷ್ಯರೂ ಅಳವಡಿಸಿಕೊಳ್ಳುವಂತಹುದು.

ಆದರೆ ಇಂದು, ಬಾಳೆಲೆಯ ಮಹತ್ವವನ್ನು ಅರಿಯುವ ಅವಕಾಶವೇ ವಿರಳವಾಗಿಬಿಟ್ಟಿದೆ. ನಗರ ಪ್ರದೇಶಗಳಲ್ಲಿ ಬಾಳೆಎಲೆ ಸಿಗುವುದು ಕಷ್ಟ ಅಂದುಕೊಂಡರೂ, ಇಂದು ಹಳ್ಳಿಗಳಲ್ಲೂ ಬಟ್ಟಲು ಪ್ರಯೋಗ ಶುರುವಾಗಿ ಬಿಟ್ಟಿದೆ. ಲಕ-ಲಕ ಹೊಳೆಯುವ, ಅದೆಷ್ಟೋ ಜನ, ಅದೆಷ್ಟೋ ಬಾರಿ ಊಟ ಮಾಡಿ ಕೈತೊಳೆದ ಬಟ್ಟಲು! ಆದರೂ ಅದೇ ಬೇಕು. ಇಲ್ಲಿ ಸಾಮಾನ್ಯವಾಗಿ ಹೇಳಿದ ಬಾಳೆಎಲೆ ಊಟದ ನಿಯಮ ಅನ್ವಯವಾಗಲಾರದು. ಎಲ್ಲವನ್ನೂ ಒಂದೆಡೆ ಬಡಿಸಿಕೊಂಡು, ಯಾವ ಪದಾರ್ಥದ ರುಚಿ ಯಾವ ರೀತಿ ಇದ್ದೀತು ಎಂಬುದೂ ತಿಳಿಯದೆ, ಒಟ್ಟಾರೆ ಒಂದಿಷ್ಟು ಹೊಟ್ಟೆಗೆ ತುರುಕುವ ಕೆಲಸ! ನಿಂತಲ್ಲೇ, ಖಾದ್ಯವಿರುವ ಸ್ಥಳಕ್ಕೇ ತೆರಳಿ ಒಂದಿಷ್ಟು ಬಡಿಸಿಕೊಂಡು ಬಂದು, ಕೆಲವನ್ನು ತಿಂದು, ಹಲವನ್ನು ಹಾಗೇ ಉಳಿಸಿ, ಬಟ್ಟಲು ಬಿಟ್ಟರೆಂದರೆ ಊಟ ಮುಗಿಯಿತು! ಅದೇ ಬಟ್ಟಲನ್ನು ಮತ್ತೆ ಅದೆಷ್ಟು ಸ್ವಚ್ಛವಾಗಿ ತೊಳೆಯಬಹುದೋ ತಿಳಿಯದೇ ಮತ್ತೆ ಬಳಸುವುದು!? ಆದರೂ ಅದೂ ಊಟವೆ!

ಬಾಳೆಎಲೆ ಮತ್ತು ಅದರಲ್ಲಿ ಊಟ ಈ ಮಹತ್ವವನ್ನು ಅರಿಯುವ ದಿನಗಳು ಮತ್ತೆ ಬರಬಹುದೆ ? ❍

*PAGE DONATED BY : **AKADAS & FAMILY***

# ಪದವಿ ಶಿಕ್ಷಣದೆದುರು ಭಾರಿ ಅವಕಾಶಗಳು

✍ ಡಾ. ಆರ್. ಜಿ. ಹೆಗಡೆ

ಪದವಿ ಶಿಕ್ಷಣದ ಉದ್ದೇಶದಲ್ಲಿ ವ್ಯಾಪಕ ಬದಲಾವಣೆ ಬಂದಿದೆ. ಅದರ ಗುರಿ ಹಿಂದೆ (ಕೆಲವರು) ಭಾವಿಸಿದ್ದಂತೆ dispassionate pursuit of knowledge ಅಂದರೆ 'ಭಾವನಾರಹಿತವಾದ ಸತ್ಯದ ಶೋಧವಾಗಿ' ಉಳಿದಿಲ್ಲ. ಅಥವಾ ಬ್ರಿಟಿಷ್ ರಾಜ್ ಕಾಲದಲ್ಲಿದ್ದಂತೆ ಗುಮಾಸ್ತರನ್ನು ಮತ್ತು ಅಂತಹ ದರ್ಜೆಯ ಪ್ರಭುತ್ವದ ಸೇವೆಯ ಕೆಲಸಕಾರರನ್ನು ತಯಾರಿಸುವುದು ಆಗಿ ಉಳಿದಿಲ್ಲ. ಗುರಿಗಳು ಬದಲಾಗಿವೆ. ನಿರ್ದಿಷ್ಟ ಸ್ಪಷ್ಟ ಗುರಿಗಳು, ನಿರೀಕ್ಷೆಗಳ ಜತೆಗೆ ಪದವಿ ಶಿಕ್ಷಣವೂ ತಾಂತ್ರಿಕ ಶಿಕ್ಷಣದ ಹಾಗೆ ಆಗಬೇಕು. ಮೂಲಭೂತವಾಗಿ ಡೀಸೆಂಟ್ ಆದ ನೌಕರಿ ದೊರಕಿಸಿಕೊಡಬೇಕು. ಕ್ಯಾಂಪಸ್ ರಿಕ್ರೂಟ್‌ಮೆಂಟ್ ಒದಗಿಸಬೇಕು. ಕನಿಷ್ಠ ಉತ್ತಮ ಉದ್ಯೋಗ ದೊರಕಿಸಿ ಕೊಡಬಲ್ಲ ಪೋಸ್ಟ್ ಗ್ರಾಜುವೇಟ್‌ನ ಮೆಟ್ಟಿಲಾಗಬೇಕು.

ಆರ್ಥಿಕ ವ್ಯವಸ್ಥೆಯ ನಿರೀಕ್ಷೆ ಕೂಡ ಇದೇ. ಕಲಿತು ಮುಗಿಸಿದ ವಿದ್ಯಾರ್ಥಿಗಳು ವಿಶಿಷ್ಟ, ವಿಶೇಷ ಜ್ಞಾನ ಮತ್ತು ಕೌಶಲಗಳನ್ನು ಹೊಂದಿ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಕ್ಷಮತೆ ಹೊಂದಿರಬೇಕು. ಎಂಜಿನಿಯರಿಂಗ್, ಎಂ.ಬಿ.ಎ. ನಾನಾ ಪೋಸ್ಟ್ ಗ್ರಾಜುವೇಟ್ ಕೋರ್ಸ್‌ಗಳು, ಕಾನೂನು, ಇವುಗಳಿಗಿಂತ ತುಸು ಕೆಳಗಿನ ಹಂತದಲ್ಲಿ ಸೃಷ್ಟಿಯಾಗಿರುವ ಬ್ಯಾಂಕುಗಳು, ಇನ್‌ಶುರನ್ಸ್, ವಾಣಿಜ್ಯ, ಐಟಿ, ಬಿ.ಟಿ., ವಿಜ್ಞಾನ ಸಂಬಂಧಿ ಉತ್ಪಾದನಾ ಉದ್ದಿಮೆಗಳು, ಆಹಾರ ಸಂಸ್ಕರಣೆ, ಕೇಟರಿಂಗ್ ಮತ್ತು ಟೂರಿಸಂನಂತಹ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡಬಲ್ಲ ಮೂಲ ತರಬೇತಿ ಹೊಂದಿರಬೇಕು. ಕೆಳಗಿನ ಹಂತದ ಶಿಕ್ಷಣದ ಅವಶ್ಯಕತೆ ಪೂರೈಸಬಲ್ಲ ಜಾಗತಿಕ ಗುಣಮಟ್ಟದ ಶಿಕ್ಷಕರನ್ನು ತಯಾರಿಸುವಂತಿರಬೇಕು. ಸಮಾಜದ ಅಭಿಪ್ರಾಯದಲ್ಲಿ ಇಂದು ಹಾಗೆ ಆಗುತ್ತಿಲ್ಲ. ಬಹುತೇಕ ಪದವೀಧರರು ಈ ನಿರೀಕ್ಷೆ ಮುಟ್ಟಲು ವಿಫಲರಾಗಿದ್ದಾರೆ. ಆದ್ದರಿಂದ ಅವರು ಅನ್ ಎಂಪ್ಲಾಯೆಬಲ್ (ಕೆಲಸಗಳನ್ನು ನಿರ್ವಹಿಸಲು ಅಶಕ್ತರಾದವರು) ಎಂಬ ಭಾವನೆ ಈ ವಲಯಕ್ಕೆ ಇದೆ.

ಪದವಿ ಶಿಕ್ಷಣದ ಮೇಲಿನ ನಿರೀಕ್ಷೆಯಲ್ಲಿ ವ್ಯಾಪಕ ಬದಲಾವಣೆ ಬಂದಿರುವುದಕ್ಕೆ ಹಲವು ಕಾರಣಗಳಿವೆ.

ಒಂದನೆಯದು ಇದು ದೇಶದ ಅತಿ ದೊಡ್ಡ ಯುವಕ ಯುವತಿಯರ ಪೂಲ್. ಕೋಟಿಗಟ್ಟಲೆ ಯುವ ಜನ ಈ ಸಂಸ್ಥೆಗಳಲ್ಲಿ ಈಗ ಕಲಿಯುತ್ತಿದ್ದಾರೆ. ಭಾರೀ ಪ್ರಮಾಣದಲ್ಲಿ ಮತ್ತು ಸುಮಾರಾಗಿ ಎರಡನೇ ದರ್ಜೆಯ, ಲಕ್ಷಗಟ್ಟಲೆ ಜನ ಬೇಕಾಗುವ ಕೆಲಸದ ಕ್ಷೇತ್ರಗಳಿಗೆ ವರ್ಕ್‌ಫೋರ್ಸ್ ಬರಬೇಕಾದುದು ಇಲ್ಲಿಂದಲೇ. ಹಾಗೆಯೇ, ಹೆಚ್ಚಾಗಿ ಈ ಜನರಲ್ ಪದವಿ ಶಿಕ್ಷಣದಿಂದ ಹೊರಬರುವವರು ಈ ವರ್ಗ ಇಂದಿನ ದಿನಗಳಲ್ಲಿ ತುಂಬ ಅಸ್ಪಿರೇಶನ್ ಆದ ಯುವ ಜನತೆಯನ್ನು ಹೊಂದಿದ ವರ್ಗ. ಈ ಯುವಕ ಯುವತಿಯರು ಹದಿನೈದು ಇಪ್ಪತ್ತು ವರ್ಷಗಳ ಹಿಂದಿನ ಹಿಂದಿನವರಂತಲ್ಲ. ಭಾರೀ ಶಕ್ತಿ ಮತ್ತು ಉತ್ಸಾಹ ಹೊಂದಿದ ವರ್ಗ ಇದು. ಮಧ್ಯಮ ವರ್ಗದ ಜೀವನ ವಿಧಾನ ಪಡೆಯಲಿಚ್ಛಿಸುವವರು ಇವರು. ಈ ಯುವ ಜನರಿಗೆ ಕಠಿಣವಾದ ದೈಹಿಕ ಪರಿಶ್ರಮದಲ್ಲಿ ತೊಡಗಿಕೊಳ್ಳುವ ಶಕ್ತಿ ಕೂಡ ಇದೆ. ಜಗತ್ತಿನ ಯಾವುದೇ ಮೂಲೆಯಲ್ಲಿ ಹೋಗಿ ಯಾವ ರೀತಿ ಉದ್ಯೋಗ ಮಾಡಲು ಕೂಡ ಅವರು ಸಿದ್ಧ. ಅವರ ಇಂತಹ ಆಶೋತ್ತರಗಳಿಗೆ ಅವರ ಹೆತ್ತವರ ಬೆಂಬಲವೂ ಇದೆ. ಏಕೆಂದರೆ ಸಾಂಪ್ರದಾಯಿಕ ಕೃಷಿ ವ್ಯವಸ್ಥೆ ಕುಸಿದಿರುವ ಹಿನ್ನಲೆಯಲ್ಲಿ ಬೇರೆ ದಾರಿ ಇಲ್ಲ. ಅಲ್ಲದೆ ಸರಿಯಾದದ್ದನ್ನು ಸರಿ ರೀತಿಯಲ್ಲಿ ಕಲಿತರೆ ಬೇಕಷ್ಟು ಉದ್ಯೋಗವಕಾಶಗಳಿವೆ ಎಂಬುದು ಅರ್ಥವಾಗಿದೆ.



ಇನ್ನೂ ಒಂದು ವಿಷಯ. ಜಾಗತೀಕರಣದ ನಂತರ ಮೊದಲ ಹಂತದಲ್ಲಿ ದೇಶದ ಬೆಳವಣಿಗೆಗೆ ಭಾರಿ ಕೊಡುಗೆ ನೀಡಿದವು ಎಂಜಿನಿಯರಿಂಗ್, ಸೈನ್ಸ್ ಅಂಡ್ ಟೆಕ್ನಾಲಜಿ, ಮ್ಯಾನೇಜ್ಮೆಂಟ್ ಮತ್ತು ಮೆಡಿಕಲ್ ಶಿಕ್ಷಣ (ಸ್ಟೆಮ್) ವ್ಯವಸ್ಥೆಗಳು. ಅವು ಭಾರಿ ಪ್ರಮಾಣದಲ್ಲಿ ಗುಣಮಟ್ಟದ ಪದವೀಧರರನ್ನು, ಸ್ನಾತಕೋತ್ತರ ಪದವೀಧರರನ್ನು ಸೃಷ್ಟಿಸಿ ದೇಶದ ಹೊಸ ಆರ್ಥಿಕತೆಯ ಬೆನ್ನೆಲುಬಾದವು. ಐಟಿಗೆ ಸಂಬಂಧಿಸಿಯಂತೂ ಜಗತ್ತಿನಾದ್ಯಂತದ ಬೇಡಿಕೆಗಳನ್ನೂ ಪೂರೈಸಿದವು. ಆಗ ಅಂತಹ ಶಿಕ್ಷಣ ಪಡೆದ ಲಕ್ಷಲಕ್ಷ ಜನ ಅದರ ಫಲವಾಗಿ ಇಂದು ಉನ್ನತ ಮಧ್ಯಮ ಮತ್ತು ಶ್ರೀಮಂತ ವರ್ಗ ಸೇರಿ ಬಿಟ್ಟಿದ್ದಾರೆ. ಅದರಿಂದ ಸೃಷ್ಟಿಯಾಗುವ ಬೃಹತ್ ಆರ್ಥಿಕತೆ ದೇಶದಲ್ಲಿ ಈವರೆಗೆ ಅಷ್ಟೊಂದು ಚುರುಕಾಗಿರದಿದ್ದ ಟ್ರಾವೆಲ್ ಮತ್ತು ಹಾಸ್ಪಿಟಾಲಿಟಿ, ಕ್ಯಾಟರಿಂಗ್, ಸೌಂದರ್ಯವರ್ಧನೆ, ಫುಡ್ ಪ್ರಿಪರೇಶನ್ ಮತ್ತು ಹಂಚಿಕೆ, ವೆಲ್‌ನೆಸ್, ಬಟ್ಟೆ, ಫ್ಯಾನ್ಸಿ ಮಾರಾಟ ಕ್ಷೇತ್ರಗಳನ್ನು ಚುರುಕಾಗಿಸಿವೆ. ಕೆಳ ಹಂತದಲ್ಲಿ ಚಿಕ್ಕ ಚಿಕ್ಕ ನಗರಗಳಲ್ಲಿ ಕೂಡ ದೊಡ್ಡ ಪ್ರಮಾಣದಲ್ಲಿ ವಾಣಿಜ್ಯ ವ್ಯವಹಾರವನ್ನು ಸೃಷ್ಟಿಸಿದೆ. ಹೀಗೆ ಬಂದಿರುವ 2ನೆಯ ಹಂತದ ಆರ್ಥಿಕ ಕ್ರಾಂತಿ ರಥವನ್ನು ಎಳೆಯಬಹುದಾದ, ಉದ್ಯೋಗಗಳನ್ನು ಹ್ಯಾಂಡಲ್ ಮಾಡಬಲ್ಲ ಕೆಲಸವನ್ನು ಜನರಲ್ ಪದವಿ ಶಿಕ್ಷಣ ಮಾಡಬೇಕಿದೆ. ಸೂಕ್ತ ಬದಲಾವಣೆ ಮಾಡಿದರೆ ಅದು ಸಾಧ್ಯ ಅನ್ನುವ ವಿಷಯ ಆರ್ಥಿಕ ವಲಯಕ್ಕೆ, ಸಮಾಜಕ್ಕೆ ತಿಳಿದಿದೆ.

ಹಾಗಾಗಿ ಮೊದಲ ದರ್ಜೆಯ ಉದ್ಯೋಗಗಳಿಗೆ ಪೂರಕವಾದ ಉದ್ಯೋಗಗಳು ನಿಭಾಯಿಸುವ ಹೊಣೆಯನ್ನು ಪದವಿ ಶಿಕ್ಷಣದ ಮೇಲೆ ಸಮಾಜ ಮತ್ತು ಆರ್ಥಿಕ ವ್ಯವಸ್ಥೆಯೇ ಹಾಕಿ ಬಿಟ್ಟಿವೆ. ಪದವಿ ಶಿಕ್ಷಣದ ಮೇಲೆ ಒಮ್ಮೆಲೇ ಭಾರಿ ಪ್ರಮಾಣದ ನಿರೀಕ್ಷೆ ಬಂದಿದೆ. ಇದು ಪದವಿ ಶಿಕ್ಷಣ ಸಂಸ್ಥೆಗಳಿಗೆ ಬೃಹತ್ತಾಗಿ ಬೆಳೆಯುವ ಅವಕಾಶ ಸೃಷ್ಟಿಸಿದೆ. ಒಂದು ರೀತಿಯ ತಳಮಳ, ರೆಸ್ಟಲೆಸ್‌ನೆಸ್ ಕಾಲೇಜು ಕ್ಯಾಂಪಸ್‌ಗಳನ್ನು ತುಂಬಿದೆ. ತಡಕಾಡುತ್ತ, ಹುಡುಕಾಡುತ್ತಾ, ಅನುಮಾನ ಪಡುತ್ತ ಆದರೂ ಅಲ್ಲಿ ಇಲ್ಲಿ ಕಾಲೇಜುಗಳಲ್ಲಿ (ಸಣ್ಣ ಪ್ರಮಾಣದ) ಕ್ಯಾಂಪಸ್ ರಿಕ್ರೂಟ್‌ಮೆಂಟ್‌ಗಳು ಆರಂಭವಾಗಿವೆ. ಪದವಿಯ ಸಿಲಬಸ್ ಏನಿರಬೇಕು? ಹೇಗಿರಬೇಕು? ಯಾವ ವಿಷಯ, ಹೇಗೆ ಕಲಿಸಬೇಕು ಇತ್ಯಾದಿ ಕುರಿತು ಹುಡುಕಾಟ

PAGE DONATED BY : **SHRI N. R. HEGDE, DOMBIVLI**

ಆರಂಭವಾಗಿದೆ. ಸಿಲಬಸ್ ಜತೆ ಆರ್ಥಿಕ ವ್ಯವಸ್ಥೆ ಬೇಡುವ ಸ್ಕಿಲ್‌ಗಳನ್ನು ಜೋಡಿಸುವುದು ಹೇಗೆ ಎನ್ನುವ ಚಿಂತನೆ ಸರಕಾರ ಹಾಗೂ ವಿಶ್ವವಿದ್ಯಾಲಯ ಮಟ್ಟದಲ್ಲೂ ಆರಂಭವಾಗಿದೆ. ಖಾಸಗಿಯಾಗಿ 'ಫಿನಿಶಿಂಗ್' ಸ್ಕೂಲ್‌ಗಳು ಆರಂಭವಾಗಿವೆ. ಮಹತ್ವದ ಬೆಳವಣಿಗೆಯಲ್ಲಿ ಅವಕಾಶದ ವಾಸನೆ ಬಡಿದಿರುವ ಹಲವು ಪ್ರಸಿದ್ಧ ಎಂಜಿನಿಯರಿಂಗ್ ಕಾಲೇಜುಗಳು ತಮ್ಮಲ್ಲಿ ಪದವಿ ಕೋರ್ಸ್‌ಗಳನ್ನು ಆರಂಭಿಸಿವೆ. ಇವನ್ನೆಲ್ಲ ಗಮನಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ ಗ್ರಾಜುವೇಟ್ ಕೋರ್ಸ್‌ನ ಸ್ಟ್ರಕ್ಚರ್ ಅನ್ನು ಬದಲಾಯಿಸಿ ನಾನಾ ರೀತಿಯ ಫ್ಲೆಕ್ಸಿಬಲ್ ಆದ, ಕೌಶಲ ಆಧರಿತ ಕೋರ್ಸ್‌ಗಳನ್ನು ಪದವಿ ಸಿಲಬಸ್ ಜತೆ ಜೋಡಿಸಬಲ್ಲ ಕಾನೂನಾತ್ಮಕ ಅವಕಾಶಗಳನ್ನು, ಸ್ಟ್ರಕ್ಚರ್‌ಗಳನ್ನು ಮುಂದೆ ಇಟ್ಟಿದೆ. ಮೂರು ಅಥವಾ ನಾಲ್ಕು ವರ್ಷಗಳಲ್ಲಿ ಪದವಿಯನ್ನು (ಹಾನರ್ಸ್) ಆಯ್ದುಕೊಳ್ಳುವ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಒದಗಿಸಿದೆ. ಇದು ಬಹಳ ಮಹತ್ವದ್ದು. ಏಕೆಂದರೆ ನಾಲ್ಕನೆಯ ವರ್ಷವನ್ನು ತಾಂತ್ರಿಕ ಸ್ವರೂಪದಲ್ಲಿ ಕಲಿಯುವ ಅವಕಾಶ ಇದೆ. ಒಟ್ಟಾರೆ ಈ ಹಿಂದೆ ಎಂಜಿನಿಯರಿಂಗ್ ಕಾಲೇಜುಗಳು ಬೆಳೆದು ನಿಂತ ರೀತಿಯ ಅವಕಾಶ ನಿಚ್ಚಳವಾಗಿದೆ.

ಆದರೂ ಯಾಕೋ ಜನರಲ್ ಪದವಿ ಶಿಕ್ಷಣ ಸಂಸ್ಥೆಗಳು, ಖಾಸಗಿ ಶಿಕ್ಷಣ ಸಂಸ್ಥೆಗಳು ಕೂಡ ಅವಕಾಶವನ್ನು ಬಳಸಿಕೊಂಡು ಭಾರಿ ಪ್ರಮಾಣದಲ್ಲಿ ಎದ್ದು ನಿಂತು ಸವಾಲನ್ನು ಸ್ವೀಕರಿಸುತ್ತಿರುವಂತಿಲ್ಲ. ಬಹುಶಃ ಇದಕ್ಕೆ ಕಾರಣ ಸುದೀರ್ಘ ಕಾಲ ಅಂತಹ 'ಚಾರ್ಮ್' ಇಲ್ಲದಿದ್ದ ಕಾಲೇಜುಗಳನ್ನು ನಡೆಸಿ ಸುಸ್ತಾಗಿ ಹೋಗಿರುವ ಮ್ಯಾನೇಜುಮೆಂಟ್‌ಗಳಿಗೆ ಬದಲಾಗುವ, ಹೊಸ ಬದಲಾವಣೆಗೆ ಬೇಕಾಗುವ ರೀತಿಯಲ್ಲಿ ಬಂಡವಾಳ ತೊಡಗಿಸುವ ಧೈರ್ಯ ಬರುತ್ತಿಲ್ಲ. ಅದಕ್ಕೂ ಹಲವು ಕಾರಣಗಳಿವೆ. ಒಂದನೆಯದು ಸ್ಕಿಲ್ ಕಂಪೋನೆಂಟ್ ಅನ್ನು ಎಲ್ಲಿ ಹೇಗೆ ಸಿಲಬಸ್‌ನಲ್ಲಿ ಕೂಡಿಸಬೇಕು ಎನ್ನುವುದು ಹೊಳೆಯುತ್ತಿಲ್ಲ. ನೀತಿಗಳು ಬದಲಾದರೂ ಸಿಲಬಸ್ ಬದಲಾಗುತ್ತಿಲ್ಲ. ಮುಖ್ಯವಾಗಿ ಕಾಲೇಜುಗಳ ಹೆಚ್ಚಿನ ಸಮಯ ಮತ್ತು ಶಕ್ತಿ ಸಿಲಬಸ್ ಮುಗಿಸುವುದರಲ್ಲಿ ಪರೀಕ್ಷೆ ನಡೆಸುವುದರಲ್ಲಿ ಖರ್ಚಾಗಿ ಹೋಗುತ್ತಿದೆ. ನಕಾರಾತ್ಮಕ ಮನಸ್ಸಿನ ಶಿಕ್ಷಕರು ಮತ್ತು ಆ ಇಡೀ ವ್ಯವಸ್ಥೆ ಹೊಸ ಬೆಳಕು ಮತ್ತು ಗಾಳಿ ಒಳ ಬರದಂತೆ ಭದ್ರವಾಗಿ ಬಾಗಿಲು ಹಾಕಿಬಿಟ್ಟಿವೆ. ಸಂಸ್ಥೆಗಳಿಗೆ ಆ ದಿಸೆಯಲ್ಲಿ ಕಾಲೇಜುಗಳನ್ನು ಒಯ್ಯಬಲ್ಲ ಮಾನವ ಸಂಪನ್ಮೂಲ ಸಿಗುತ್ತಿಲ್ಲ.

ಆದರೆ ಇರುವ ಅವಕಾಶಗಲಿಗೆ ಹೋಲಿಸಿದರೆ ಪರಿಮಿತಿಗಳು ತುಂಬ ಚಿಕ್ಕವು. ಹಾಗಾಗಿ ಇಂತಹ ಸಂದರ್ಭವನ್ನು ಬಳಸಿಕೊಳ್ಳಲು ಮನಸ್ಸುಳ್ಳ 'ಕಾಲೇಜ್ ಆಫ್ ಎಕ್ಸಲೆನ್ಸ್' ಅನ್ನು ಆರಂಭಿಸುವ ಆಸಕ್ತಿಯುಳ್ಳ (ಕನಿಷ್ಠ) ದೇಶದಾದ್ಯಂತ ಇರುವ ದೊಡ್ಡ ದೊಡ್ಡ ಸಂಸ್ಥೆಗಳು, ಬಂಡವಾಳ ಹೂಡ ಬಯಸುವವರು ಈಗ ಏನು ಮಾಡಬಹುದು? ಸಂತೋಷದ ವಿಷಯವೆಂದರೆ ಎನ್‌ಇಪಿ ಇಂತಹ ಹೂಡಿಕೆಗೆ ಅಗತ್ಯವಾಗಿರವ ಕಾನೂನಾತ್ಮಕ ಅವಕಾಶಗಳನ್ನು ಕಲ್ಪಿಸಿವೆ. ಇಂದಿನ ತನಕ ಔಟ್ ಆಫ್ ಸಿಲಬಸ್ ಆಗಿದ್ದ ವಿಷಯಗಳನ್ನು ಸಿಲಬಸ್ ಒಳಗೆ ತರಲು ಎನ್‌ಇಪಿ ಹಲವು ರೀತಿಯ ಅವಕಾಶಗಳನ್ನು ಕಲ್ಪಿಸಿದೆ. ಅಂತಹ ಟೈಮ್ ಟೇಬಲ್ ಅನ್ನು ಸ್ಟ್ರಕ್ಚರ್ ಅನ್ನು ಒದಗಿಸಿದೆ. ಕಾಲೇಜುಗಳು ಮಾಡಬೇಕಿರುವುದು ಕೌಶಲ ಅಭಿವೃದ್ಧಿಯನ್ನು ಗಂಭೀರವಾಗಿ ತೆಗೆದುಕೊಂಡು ಅದಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳುವುದು. ಇಂತಹ ಪಾಠಗಳನ್ನು ಅವು ಎಂಜಿನಿಯರಿಂಗ್ ಕಾಲೇಜು, ಐಟಿಐ ಮತ್ತಿತರ ಕೌಶಲ ಅಭಿವೃದ್ಧಿ ಸಂಸ್ಥೆಗಳಿಂದ ಕಲಿಯಬಹುದಾಗಿದೆ.

1. ಸಂಪೂರ್ಣ ರೆಸಿಡೆನ್ಶಿಯಲ್ ಮಾದರಿ ಕಾಲೇಜುಗಳನ್ನು ಆರಂಭಿಸಬೇಕು. ಅಂದರೆ ವಿದ್ಯಾರ್ಥಿಗಳ ಸಂಪೂರ್ಣ ಸಮಯ ಕಾಲೇಜಿಗೆ ಅವರ ಕಲಿಕೆಗೆ ಲಭ್ಯವಾಗಬೇಕು.
2. ಇಂಟಿಗ್ರೇಟೆಡ್ ಮಾದರಿ ಕಾಲೇಜುಗಳನ್ನು ನಡೆಸಬೇಕು. ಕೌಶಲ ಬೋಧನೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ಕೇವಲ ವಿಜ್ಞಾನ ವಿಷಯವೊಂದಕ್ಕೆ ಅಲ್ಲ ಕಾಮರ್ಸ್ ಹಾಗೂ ಆರ್ಟ್ಸ್‌ಗೆ ಕೂಡ ಅರ್ಥಪೂರ್ಣ ಪ್ರಾಕ್ಟಿಕಲ್‌ಗಳನ್ನು ನಡೆಸಬೇಕು. ಸಿಲಬಸ್ ಮತ್ತು ಪ್ರಾಕ್ಟಿಕಲ್‌ಗಳು ಹೇಗಿರಬೇಕು ಎನ್ನುವುದನ್ನು ಅಕಾಡೆಮಿಕ್, ಕೈಗಾರಿಕೆ ಮತ್ತು ಪ್ರಾದೇಶಿಕವಾಗಿ ಯಶಸ್ವಿಯಾಗಿರುವ ತಜ್ಞರು ನಿಜಕ್ಕೂ ಸೇರಿ ರೂಪಿಸಬೇಕು.
3. ಆಧುನಿಕ ಮನೋಭಾವದ ಶಿಕ್ಷಕರನ್ನು ಮಾತ್ರ ಉಳಿಸಿಕೊಳ್ಳಬೇಕು.
4. ಎನ್‌ಸಿಸಿ ಒಂದು ಪ್ರಾದೇಶಿಕ ಮತ್ತು ಒಂದು ಜಾಗತಿಕ ಕೌಶಲಗಳನ್ನು ಕಲಿಸಬೇಕು.
5. ಕ್ಯಾಂಪಸ್ ರಿಕ್ರೂಟ್‌ಮೆಂಟ್ ತರಬೇತಿಯನ್ನು ವ್ಯವಸ್ಥಿತವಾಗಿ ನೀಡಬೇಕು.

ಇಂತಹ ಕಾಲೇಜುಗಳು ಬಿಸಿನೆಸ್ ಆಗಿ ಕೂಡ ಭಾರಿ ಯಶಸ್ವಿ ಯಾಗಲಿದೆ. ಏಕೆಂದರೆ ರಾಜ್ಯಾದ್ಯಂತ ಹಲವು ಪದವಿ ಕಾಲೇಜುಗಳು ದುಃಸ್ಥಿತಿಯಲ್ಲಿವೆ. ಮತ್ತು ಇಂದಿನ ಪಾಲಕರು ಮಕ್ಕಳ ಒಳ್ಳೆಯ ಶಿಕ್ಷಣಕ್ಕಾಗಿ ಎಷ್ಟು ಖರ್ಚು ಮಾಡಲು ಕೂಡ ಸಿದ್ಧ.

ಮತ್ತೆ ಇಂತಹ ಪದವಿ ಕಾಲೇಜುಗಳನ್ನು ಆರಂಭಿಸುವುದು ಕೇವಲ ಬಿಸಿನೆಸ್ ಮಾತ್ರ ಅಲ್ಲ. ದೇಶಸೇವೆ ಕೂಡ. ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಿ, ಅವರಿಗೊಂದು ಬಾಳು ಒದಗಿಸಿ ಅದಕ್ಕೆ ಸೂಕ್ತ ಶುಲ್ಕ ತೆಗೆದುಕೊಳ್ಳುವುದು ತಪ್ಪೇನೂ ಅಲ್ಲ. ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ನೆರವಾಗಲು ಸರಕಾರಗಳು ಕೂಡ ಇಂತಹ ಶ್ರೇಷ್ಠತೆಯ ಪದವಿ ಕಾಲೇಜುಗಳ ಆರಂಭಕ್ಕೆ ಮುಂದಾಗಬೇಕು.

(ಕೃಪೆ : ವಿಶ್ವವಾಣಿ)

# DONATIONS

## HAVYAKA WELFARE TRUST

| | | |
|---|---|---|
| 1. | Shri. G. V. Hegde, Mulund | Rs. 1,00,001/- |
| 2. | Smt. Laxmi Chitrigimath | Rs. 1,00,000/- |
| 3. | Shri Umesh Maskeri | Rs. 5,000/- |

## HWT - WWC

| | | |
|---|---|---|
| 1. | Smt. Amita Bhagwat | Rs. 10,000/- |

*PAGE DONATED BY : **SHRI ROKESH HEGDE & FAMILY, DAHISAR***

*ಕಥೆ*

# ಗ್ರಹಣಮುಕ್ತ ಚಂದ್ರ

✍ **ಕರ್ಕಿ ಸುರೇಶ್ ಹೆಗಡೆ**



'ಸಂಧ್ಯಾ.. ಓ ಸಂಧ್ಯಾ.. ಆಟೋ ಚಾವಿ ಮರೆತೇ ಬಿಟ್ಟೆ ನೋಡು. ಮಂಚದ ಮೇಲೆ ಇದೆ. ಪ್ಲೀಸ್ ತಂದ್ಕೊಡು' ಅಂತ ಕಿರಣ ಹೇಳಿದ್ದು ಕೇಳಿ, ಬಟ್ಟೆ ಒಗೆಯುತ್ತಿದ್ದ ಮಡದಿ ಸಂಧ್ಯಾ ಎದ್ದು ಚಾವಿ ತಂದು ಕೊಟ್ಟು, 'ರೀ... ಸಾವಕಾಶವಾಗಿ ಹೋಗಿ.. ಮತ್ತೆ ಮಧ್ಯಾಹ್ನ ಊಟಕ್ಕೆ ಮನೆಗೆ ಬನ್ನಿ. ಮೀನಿನ ಸಾರು ಮಾಡ್ತೀನಿ' ಅಂತ ಹೇಳಿದಳು. 'ಆಯ್ತು ಎರಡು ಗಂಟೆಗೆ ಬರ್ತೀನಿ. ಕಾಳಜಿ ಬೇಡ' ಅಂತ ಆಟೋ ಶುರು ಮಾಡಿದ. ಗಡಿಯಾರ ನೋಡಿ ದಿನನಿತ್ಯದ ದಿನಚರಿಗೆ ಮುಂದಾದ. ಪ್ರತಿದಿನ ಬಿಷಪ್ ಕಾಟನ್ ಶಾಲೆಗೆ ಒಂಬತ್ತು ಗಂಟೆಗೆ ವಿದ್ಯಾರ್ಥಿಗಳನ್ನು ತಲುಪಿಸಿ, ಸಂಜೆ ನಾಲ್ಕು ಗಂಟೆಗೆ ತಿರುಗಿ ಅವರವರ ಮನೆಗೆ ತಲುಪಿಸುವ ಜವಾಬ್ದಾರಿಯ ಕೆಲಸವನ್ನು ಒಪ್ಪಿಕೊಂಡು, ಅದಾಗಲೇ ಮೂರು ವರ್ಷವಾಗಿತ್ತು. ಶಾಲೆಯ ಹುಡುಗರ ಮನೆಯವರು ಆರ್ಥಿಕವಾಗಿ ಸ್ಥಿತಿವಂತರು. ಆಟೋ ಚಾಲಕ ಕಿರಣ ಅತ್ಯಂತ ಮೃದುಭಾಷಿ. ಶಾಲೆಯ ಹುಡುಗರಿಗೆ ಅವನು ಕಿರಣ ಅಂಕಲ್ ಆದ್ರೆ ಅವರ ಮನೆಯವರಿಗೆ ಕಿರಣ ಅಣ್ಣಾ. ಪ್ರತಿತಿಂಗಳೂ ಸರಿಯಾಗಿ ಮೂವತ್ತನೇ ತಾರೀಕಿಗೆ ತಿಂಗಳ ಬಾಡಿಗೆ ಕೊಡುತ್ತಿದ್ದರು. ಶಾಲೆಯ ವೇಳೆಯ ನಡುವಿನ ಕಾಲದಲ್ಲಿ, ಉಳಿದ ಆಟೋದವರಂತೆ ಸಾಮಾನ್ಯ ಬಾಡಿಗೆಗೆ ಮೀಸಲಾತಿ. ಬೆಳಿಗ್ಗೆ ಎಂಟುವರೆಗೆ ಹೊರಟರೆ ಮನೆಗೆ ಬರುವಾಗ ರಾತ್ರಿ ಎಂಟು. ಆಗಾಗ ಮನೆಯವಳು ವಿಶೇಷವಾಗಿ ಕರೆದಾಗ ಮಧ್ಯಾಹ್ನ ಊಟಕ್ಕೆ ಮನೆಗೆ ಬರುತ್ತಿದ್ದ.

ಬೆಂಗಳೂರು ಲಾಲ್‌ಬಾಗ್ ಹತ್ತಿರ ಪ್ರಯಾಣಿಕರನ್ನು ಇಳಿಸಿ ಗಡಿಯಾರ ನೋಡಿದಾಗ, ಮನೆಯ ಮೀನು ಸಾರಿನ ನೆನಪಾಯ್ತು. ಸಮುದ್ರ ತೀರದ ಕಾರವಾರದ ಕಿರಣನಿಗೆ ಮೀನು ಅಂದ್ರೆ ಪಂಚಪ್ರಾಣ ಎನ್ನುವುದು ಹೆಂಡತಿ ಸಂಧ್ಯಾಗೆ ತಿಳಿದಿತ್ತು. ಗಂಡನ ತರಕಾರಿ ಪಲ್ಯ ಮಾಡಿದಾಗಿನ ಊಟ... ಮತ್ತೆ ಮೀನಿನ ಊಟದ ವ್ಯತ್ಯಾಸದ ಅರಿವಿತ್ತು. ಕಿರಣ ಬರೋಬ್ಬರಿ ಎರಡು ಗಂಟೆಗೆ ಮನೆ ಮುಟ್ಟಿದ. ವಿಜ್ಞಾನದ ಹನ್ನೆರಡನೇ ವರ್ಗದ ಮಗ ಆದಿತ್ಯ ಕಾಲೇಜಿನಿಂದ ಬಂದು ಊಟಕ್ಕೆ ಕುಳಿತಿದ್ದ. 'ಅಪ್ಪಾ ಮೀನಿನ ಸಾರು ಸಕತ್ತಾಗಿದೆ... ' ಅಂತ ಬಾಯಿ ಚಪ್ಪರಿಸುತ್ತ ಹೇಳಿದ. 'ನಿಮ್ಮಮ್ಮನ ಊಟ ಅಂದ್ರೆ ನಂಬರ್ ವನ್'. ಗಂಡನ ಹೊಗಳಿಕೆ ಕೇಳಿ ಸಂಧ್ಯಾ ಖುಷಿಯಾಗಿ, 'ಬನ್ನಿ ಬೇಗ.. ಬಿಸಿ.. ಬಿಸಿ.. ಊಟಕ್ಕೆ' ಅಂದಳು. ಬಂಗುಡೆ ಮೀನಿನ ಕಂಪು ಚಿಕ್ಕ ಮನೆಯಲ್ಲಿ ತೇಲಾಡುತ್ತಿತ್ತು. ಗಡದ್ದಾಗಿ ಊಟ ಮಾಡಿ, ಮನೆಯ ಮುಂದಿನ ಬೀಡಾ ಅಂಗಡಿಗೆ ಹೋಗಿ ಒಂದು ಸಿಗರೇಟು ಹಚ್ಚಿ ಖುಷಿಯಾಗಿ ಹೊಗೆ ಬಿಟ್ಟ.

'ಆದಿತ್ಯ ನಿನ್ನ ಬೋರ್ಡ್ ಎಕ್ಸಾಮ್ ಫೀ ಮತ್ತು ಟ್ಯೂಶನ್ ಫೀ ಎಷ್ಟು ಆಗುತ್ತೆ ಅಂತ ಸಂಜೆ ಹೇಳು. ನಾಳೆಗೆ ಕೊಡುತ್ತೇನೆ. ಚೆನ್ನಾಗಿ ಅಭ್ಯಾಸ ಮಾಡು ಮಗಾ. ಪರೀಕ್ಷೆ ಹತ್ತಿರ ಬಂತು' ಎಂದು ಟ್ಯೂಶನ್ ಹೋಗುವ ಮಗನಿಗೆ ಹೇಳಿದ. 'ಹ್ಞೂಂ ಅಪ್ಪಾ ಕಾಳಜಿ ಮಾಡಬೇಡಿ' ಅಂತ ಆದಿತ್ಯ ಹೇಳಿ, 'ಅಮ್ಮಾ ಟಾಟಾ' ಅಂದ. ಪ್ರತೀ ತಾಯಿಯಂತೆ ಸಂಧ್ಯಾ ಮಗನನ್ನು ಗೇಟಿನವರೆಗೆ ಬಿಟ್ಟು 'ಸೈಕಲ್ ನಿಧಾನ ಪುಟ್ಟಾ... ನೀರಿನ ಬಾಟ್ಲಿ ಬ್ಯಾಗ್‌ನಲ್ಲಿ ಇದೆ. ಬದಿಯ ಜಿಪ್ ಪಾಕೆಟ್‌ನಲ್ಲಿ ಇಪ್ಪತ್ತು ರೂಪಾಯಿ ಇಟ್ಟಿದ್ದೀನಿ' ಅಂತ ಕಿವಿಯಲ್ಲಿ ಹೇಳಿದ್ದು ಕೇಳಿ ಆದಿತ್ಯ ನಕ್ಕ. ಅಪ್ಪಾ ದಿನಾ ಖರ್ಚಿಗೆ ಕೊಟ್ಟಿದ್ರಲ್ಲಿ ಎಪ್ಪತ್ತು ರೂಪಾಯಿ ಉಳಿಸಿ ಅದರಲ್ಲಿ ಐವತ್ತು ಮಾದೇಶ ಅಣ್ಣನ ಚೀಟಿಗೆ ಹಾಕಿ ಇಪ್ಪತ್ತು ನನ್ನ ಪಾಲಿನದು ಅಂತ ಅವನಿಗೆ ಗೊತ್ತು. ಆಗಾಗ ಅಪ್ಪ ಸಹಿತ ಕೊಡುತ್ತಿದ್ದರು. ಅಪ್ಪ.. ಅಮ್ಮನ ಆರ್ಥಿಕ ಸ್ಥಿತಿ ಅವನಿಗೆ ಅರಿವಾಗಿತ್ತು. ಅಭ್ಯಾಸದಲ್ಲಿ ಅತ್ಯಂತ ಪರಿಶ್ರಮದ ಹುಡುಗ.

'ಸಂಧ್ಯಾ... ಮಲಗಿದ್ದೀಯೇ ಇನ್ನಾ...?' ಅಂತ ನಾಗಜ್ಜಿ ಬಾಗಿಲು ತಟ್ಟಿ ಕರೆದಾಗ 'ಹೌದಜ್ಜಿ ಎದ್ದೆ. ಐದು ನಿಮಿಷದಲ್ಲಿ ಬರ್ತಿನಿ' ಅಂತ ಸಂಧ್ಯಾ ಹೇಳಿ, ಮುಖ ತೊಳೆದು ಗಡಿಯಾರ ನೋಡಿದಾಗ ಸಂಜೆ ನಾಲ್ಕು ಗಂಟೆ ಆಗಿತ್ತು. ಪ್ರತಿನಿತ್ಯ ಸಂಜೆ ಎರಡು ತಾಸು ನಾಗಜ್ಜಿಯ ಮಗ ತಂದ ಮಲ್ಲಿಗೆ ಹೂವಿನ ಹಾರ ಕಟ್ಟಿ ಕೊಡುವ ಕೆಲಸ ವಠಾರದ ಹನ್ನೆರಡು ಹೆಂಗಸರು ಒಪ್ಪಿಕೊಂಡಿದ್ದರು. ನಾಗಜ್ಜಿಯ ಮಗ ಪ್ರತಿನಿತ್ಯ ಬೆಳಿಗ್ಗೆ ಎಂಟು ಗಂಟೆಗೆ ತಲಾ ಎಂಬತ್ತು ರೂಪಾಯಿ ಕೊಟ್ಟು, ಥ್ಯಾಂಕ್ಸ್ ಹೇಳಿ ಹೋಗುತ್ತಿದ್ದ. ನಾಗಜ್ಜಿಯನ್ನು ಕಂಡರೆ ವಠಾರದ ಎಲ್ಲರಿಗೂ ಭಯ ಭಕ್ತಿ. ಕಷ್ಟದಲ್ಲಿದ್ದಾಗ ಎಲ್ಲಾ ಹೆಂಗಸರಿಗೆ ಸಲಹೆ, ಸಹಾಯ, ಸಹಕಾರ ಅವಳಿಂದ. ವಠಾರದ ಮಹಿಳೆಯರು ಚೂರು ಪಾರು ಬಂಗಾರದ ಒಡವೆ ಮಾಡಿಕೊಂಡಿದ್ದು ಹೂವಿನ ಹಾರದ ಕೆಲಸ ಮಾಡಿ ಅಂತ ಎಲ್ಲ ಗಂಡಂದಿರಿಗೆ ತಿಳಿದಿತ್ತು.

'ಅಮ್ಮಾ..' ಅಂತ ಮಗ ಕೂಗಿದ್ದು ಕೇಳಿ ಸಂಧ್ಯಾ ಬಾಗಿಲು ತೆರೆದಳು. 'ಅಮ್ಮಾ ಇವತ್ತು ಗಣಿತದ ಪರೀಕ್ಷೆ ಇತ್ತು. ನೂರಕ್ಕೆ ನೂರು ಬಂದಿದೆ. ಸ್ವೀಟ್ ಮಾಡು ಅಮ್ಮಾ' ಅಂದ. ಸಂಧ್ಯಾ ಖುಷಿಯಿಂದ 'ಮಗಾ ಊಟ ಆದ್ಮೆಲೆ ನಾವೆಲ್ಲರೂ ಐಸ್‌ಕ್ರೀಮ್ ತಿಂದು ಬರುವ' ಅಂದಳು. ಮಗನಿಗೆ ಚಹಾ ಮತ್ತು ಬಿಸ್ಕೆಟ್ ಕೊಟ್ಟು ದೇವರಿಗೆ ದೀಪ ಹಚ್ಚಲು ಮುಂದಾದಳು. ಆದಿತ್ಯ ಅಭ್ಯಾಸದ ಚಿಕ್ಕ ಕೋಣೆಗೆ ಹೋದ. ಸಂಧ್ಯಾ ರಾತ್ರಿಯ ಊಟದ ತಯಾರಿಗೆ ತೊಡಗಿದಳು. ಸಂಧ್ಯಾ... ಅಂತ ಪತಿ ಕಿರಣ್ ಕರೆದಂತಾಯ್ತು. ಹೋಗಿ ಬಾಗಿಲು ತೆಗೆದು, ಪತಿಗೆ ಕುಡಿಯಲು ನೀರು ಕೊಟ್ಟಳು. ಸುಸ್ತಾಗಿದ್ದ ಕಿರಣ ಸ್ನಾನ ಮಾಡಲು ಹೊರಟ. 'ರೀ ಊಟ ಆದ ಮೇಲೆ ಐಸ್‌ಕ್ರೀಮ್ ನನ್ನಿಂದ ನಿಮಗೆಲ್ಲ. ಆದಿತ್ಯ ಒಳ್ಳೆಯ ಮಾರ್ಕ್ ತಂದಿದ್ದಾನೆ'. 'ಗುಡ್ ಕಂಗ್ರಾಟ್ಸ್ ಆದಿತ್ಯ' ಅಂತ ಓದುತ್ತಿದ್ದ ಮಗನಿಗೆ ಅಭಿನಂದಿಸಿದ. ಸ್ನಾನ ಮಾಡಿ ಬಂದು, ದೇವರಿಗೆ ನಮಸ್ಕಾರ ಮಾಡಿ ಚಿಕ್ಕದಾಗಿ ಟೀವಿ ಹಚ್ಚಿದಾಗ ಅಣ್ಣಾವ್ರ ಗಂಧದ ಗುಡಿಯ ಹಾಡು ಕೇಳಿ ಸಂತಸದಿಂದ ತಾನೂ ಸ್ವರ ಸೇರಿಸಿದ. ಕಿರಣನಿಗೆ ಚಿಕ್ಕಂದಿನಿಂದಲೇ ಹಾಡುವ ಹುಚ್ಚು. ಸುಮಾರು ಚೆನ್ನಾಗಿಯೇ ಹಾಡುತ್ತಿದ್ದ. ಸ್ಕೂಲಿನಲ್ಲಿ ಪ್ರಶಸ್ತಿಗಳು ಬಂದಿದ್ದವು. ಆಗ ಚಿಕ್ಕ ಚೊಕ್ಕ ಆರ್ಕೆಸ್ಟ್ರಾ ತಂಡದವರು ಹಾಡಲು ಕರೆಯುತ್ತಿದ್ದರು. ಊರಿನಿಂದ ಬೆಂಗಳೂರಿಗೆ ನೌಕರಿಯನ್ನು ಅರಸಿ ಬಂದು, ಒಂದೆರಡು ವರುಷ ಗ್ಯಾರೇಜ್‌ನಲ್ಲಿ ಕೆಲಸ ಮಾಡಿ ರಿಪೇರಿಗೆ ಬಂದ ರಿಕ್ಷಾವನ್ನು ಖರೀದಿಸಿ, ರಿಕ್ಷಾ ಚಾಲಕನಾದ. ಆಗಾಗ ಸಾರ್ವಜನಿಕ ಸಮಾರಂಭಗಳಲ್ಲಿ ಹಾಡುವ ಅವಕಾಶ ಸಿಕ್ಕಾಗ, ಚೆನ್ನಾಗಿ ಹಾಡಿ ಪ್ರಶಂಸೆ ಗಿಟ್ಟಿಸುತ್ತಿದ್ದ. ಅವನಲ್ಲಿದ್ದ ಸಂಗೀತದ ಕಲೆ ಪರೋಕ್ಷವಾಗಿ ಅವನನ್ನು ಸುಮಾರು ದೊಡ್ಡವರನ್ನು ಪರಿಚಯಿಸಿ ಅವನ ಆಟೋದಲ್ಲಿ ಅವರ ಮಕ್ಕಳನ್ನು ಶಾಲೆಗೆ ಬಿಡುವ.. ತರುವ ಜವಾಬ್ದಾರಿಯನ್ನು ಕೊಟ್ಟಿತ್ತು. ಆಟೋ ಕಿರಣ್‌ನ ನಂಬರ್ ನೂರಾರು ಜನರಿಗೆ ಚಿರಪರಿಚಿತ ಕಿರಣನ ಸೇವಾ ಸ್ವಭಾವದಿಂದ ವಯೋವೃದ್ಧರು ಅವನನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿ ಬರುವ ಬಾಡಿಗೆಯೇ ಜಾಸ್ತಿ.

*PAGE DONATED BY : **SHRI ANANT GANESH BHAT, BANDRA & FAMILY***

'ರೀ.. ಚೆನ್ನಾಗಿ ಹಾಡ್ತೀರಾ.. ಈಗ ಊಟ ಮಾಡಿ' ಅಂತ ಸಂಧ್ಯಾ ಹೇಳಿ, ಆದಿತ್ಯಾ.. ಬಾ..' ಅಂತ ಮಗನನ್ನು ಕರೆದಳು. ಮೂವರೂ ಒಟ್ಟಿಗೆ ಊಟ ಮಾಡಿ ಐಸ್‌ಕ್ರೀಂ ತಿನ್ನಲು ಹೊರಟಾಗ, ನೆರೆಮನೆಯ ಆದಿತ್ಯನ ಗೆಳೆಯ ಕುಮಾರ ನೋಡಿ 'ಏನು ಆಂಟೀ.. ಆದಿತ್ಯನಿಗೆ ನೂರಕ್ಕೆ ನೂರಾ? ಐಸ್‌ಕ್ರೀಮ್ ಪಾರ್ಟಿನಾ?' ನಗುತ್ತ ಕೇಳಿದ. 'ಹೌದು ಮತ್ತೆ.. ನೀನೂ ಬಾ.. ಅಮ್ಮನಿಗೆ ಹೇಳಿ' ಅಂದಳು ಸಂಧ್ಯಾ. 'ಆಯ್ತು' ಅಂತ ಕುಮಾರ ವಠಾರದ ಎಲ್ಲರಿಗೂ ಕೇಳುವಂತೆ, 'ಅಮ್ಮಾ... ಕಿರಣ್ ಅಂಕಲ್ ಒಟ್ಟಿಗೆ ಐಸ್‌ಕ್ರೀಮ್ ತಿನ್ನಲು ಹೋಗ್ತೀನಿ' ಅಂತ ಒದರಿದ. ವಠಾರದ ಅಂಗಳದಲ್ಲಿ ಆಡುತ್ತಿದ್ದ ಮಕ್ಕಳ ಸೈನ್ಯ ಆಸೆಯಿಂದ ಕತ್ತು ತಿರುಗಿಸಿ ನೋಡಿದವು.

ಐಸ್‌ಕ್ರೀಮ್ ತಿಂದು ಮನೆಗೆ ಬರುವಾಗ ರಾತ್ರಿಯ ಹತ್ತು ಗಂಟೆಯಾಗಿತ್ತು. ಕುಮಾರನ ತಾಯಿ ಎಲ್ಲರಿಗೂ ಫಿಲ್ಟರ್ ಕಾಫಿ ಕೊಟ್ಟು, 'ಆದಿತ್ಯ ಕಂಗ್ರಾಟ್ಸ್ ಕಣೋ.. ಅಭ್ಯಾಸ ಚೆನ್ನಾಗಿ ಮಾಡು.. ನಮ್ಮ ಕುಮಾರನಿಗೂ ಸ್ವಲ್ಪ ಬುದ್ಧಿ ಹೇಳೋ.. ಈ ಸಲ ಫಸ್ಟ್ ಕ್ಲಾಸ್ ಬಂದ್ರೆ ಒಬ್ಬಟ್ಟು ಮಾಡಿ, ಎಲ್ಲರಿಗೂ ಕೊಡ್ತೀನಿ' ಅಂದಳು. ಆದಿತ್ಯ ನಗುತ್ತ.. 'ಆಂಟೀ.. ತಯಾರಿ ಮಾಡಿ ಮತ್ತೆ.. ನನ್ನ ಪ್ರಕಾರ ಕುಮಾರ ಈ ಸಲ ಫಸ್ಟ್ ಕ್ಲಾಸ್ ಗ್ಯಾರಂಟಿ' ಅಂತ ಹೇಳಿ ಮನೆಗೆ ಸೇರಿ ತನ್ನ ಕೋಣೆಯಲ್ಲಿ ಸಂತೋಷದಿಂದ ಅಭ್ಯಾಸಕ್ಕೆ ಕುಳಿತ. ಸ್ವಲ್ಪ ಸಮಯದಲ್ಲಿ ಅಪ್ಪನ ಸುಸ್ತಾದ ಜೀವದ ಗಡದ್ದು ನಿದ್ರೆಯ ಗುರುತಾದ ಗೊರಕೆಯ ಸದ್ದು ಕೇಳ್ತು.

ಕೌಸಲ್ಯಾ ಸುಪ್ರಜಾ ರಾಮ.. ಅಂತ ಹತ್ತಿರದ ಶ್ರೀ ಬಾಲಾಜಿ ದೇವಾಲಯದಿಂದ ಸುಪ್ರಭಾತ ಕೇಳಿ ಸಂಧ್ಯಾ ಎದ್ದು ಕಣ್ಣೊರಸಿ ಅಂಗೈ ಜೋಡಿಸಿ ಕರಾಗ್ರೇ ವಸತೇ ಲಕ್ಷ್ಮಿ ಕರಮಧ್ಯೆ ಸರಸ್ವತಿ ಕರಮೂಲೆತು ಗೋವಿಂದಾಃ ಅಂತ ಹೇಳುತ್ತಾ ಅಂಗೈನ್ನು ಕಣ್ಣಿಗೆ ಒತ್ತಿಕೊಂಡಳು. ವಠಾರದಲ್ಲಿ ಇದ್ದ ಗಿಡಗಳು ಮೂಡಲ ಗಾಳಿಗೆ ಅಲ್ಲಾಡುತ್ತಿದ್ದವು. ಹಕ್ಕಿಗಳು ಒಂದಕ್ಕೊಂದು ಸುಪ್ರಭಾತ ಹೇಳುವ ತರಹ ಚಿವ್ ಚಾವ್ ಅನ್ನುತ್ತಾ ದಿನದಲ್ಲಿ ಆಹಾರ ಸಿಗುವ ದಿಶೆಗಳನ್ನು ನಿರ್ಧರಿಸಿದ್ದವು. ಸಂಧ್ಯಾ ಸ್ನಾನ ಮಾಡಿ ರಂಗೋಲಿ ಹಿಟ್ಟಿನ ಡಬ್ಬಿ, ನೀರು, ಪೊರಕೆಯನ್ನು ಹಿಡಿದು ಹೊರಬಂದಾಗ ನಾಗಜ್ಜಿ ನೋಡಿ 'ಇವತ್ತು ನಾನು ಫಸ್ಟ್' ಅಂತ ಹೇಳಿ ನಕ್ಕಳು. ಕೆಲವೇ ಕ್ಷಣದಲ್ಲಿ ವಠಾರದ ಅಂಗಳ, ಹೆಂಗಳೆಯರಿಂದ ಹಾಕಿದ ಸುಂದರವಾದ ರಂಗೋಲಿಗಳಿಂದಾಗಿ ರಾರಾಜಿಸುತ್ತಿತ್ತು.

ಸಂಧ್ಯಾ ದೇವರ ಪೂಜೆ ಮಾಡಿ ಬೆಳಗ್ಗಿನ ತಿಂಡಿ, ಚಹಾ ತಯಾರಿಸಿ ರೈಲ್ವೆ ಇಂಜಿನ್ ತರಹ ಗೊರಕೆ ಹೊಡೆಯುತ್ತಿದ್ದ ಪತಿ ಕಿರಣನನ್ನು ನೋಡಿ.. 'ಅಯ್ಯೋ ದೇವ್ರೇ.. ಇವರ ಟ್ರೆನ್ ಇನ್ನೂ ಸ್ಟೇಶನ್ ಮುಟ್ಟಲಿಲ್ಲವಾ ಇವತ್ತು...' ಅಂತ ಮನಸಲ್ಲೇ ನಕ್ಕಳು. ಪತಿಗೆ ಬಚ್ಚಲಲ್ಲಿ ಬಿಸಿನೀರು, ಟವೆಲ್, ದಾಡಿಪೆಟ್ಟಿಗೆ ಇಟ್ಟು.. 'ರೀ.. ರೀ.. ಏಳಿ ಬೇಗಾ.. ಎಂಟು ಗಂಟೆ' ಆಯ್ತು. ಎದ್ದ ಕಿರಣ ಹಾಸಿಗೆ.. ಚಾದರ ಮಡಚಿ ಜಾಗದಲ್ಲಿ ಇಟ್ಟ. ಹೆಂಡತಿ ಮಾಡಿದ ಉಪಿಟ್ಟಿನ ಸುವಾಸನೆ ಮನೆಯಲ್ಲಿ ಹರಡಿತ್ತು. ಬೇಗ ಬೇಗನೆ ಸ್ನಾನ ಮುಗಿಸಿ ಸಂಧ್ಯಾ ಕೊಟ್ಟ ಉಪ್ಪಿಟ್ಟು.. ಚಹಾ ಕುಡಿದು, ಹೆಂಡತಿಯನ್ನು ಹೊಗಳಿದ. ಆದಿತ್ಯನ ಇವತ್ತು ಕಟ್ಟಬೇಕಾದ ಫೀ ನೆನಪಾಯಿತು. ನಿನ್ನೆಯೇ ಶಾಲೆಯ ಮಕ್ಕಳ ಮನೆಯವರು ಎರಡು ತಿಂಗಳ ಅಡ್ವಾನ್ಸ್ ಕೊಟ್ರು. ಮಗನಿಗೆ ಶುಭ ಹಾರೈಸಿದ್ದರು.

*(ಮುಂದುವರಿಯುವುದು)*

## ಎಲ್ಲಿ ಕಳಕೊಂಡಿರುವೆ ನಾ ?

**– ಶಾರದಾ ಎ. ಅಂಚನ್, ಕೊಡವೂರು**

ಚಾಚಿಕೊಂಡಿರುವ ವಿಶಾಲ ಜಗದೊಳಗೆ
ಗಿಜಿಗುಟ್ಟುತ್ತಿರುವ ಜನಸಾಗರದ ಬಿಸಿಯುಸಿರ ಧಗೆ
ವೈಭೋಗ-ದಾರಿದ್ರ್ಯ, ಧರ್ಮ-ಅಧರ್ಮಗಳ ಸಾಲು ಹಣತೆಗೆ
ಮಾನವೀಯ - ಅಮಾನವೀಯ, ನ್ಯಾಯ-ಅನ್ಯಾಯಗಳ ಎಣ್ಣೆ ಬೆಳಕಿಗೆ
ಈ ನಡುವೆ ಎಲ್ಲಿ ಕಳಕೊಂಡಿರುವೆ ನಾ ? ॥

ಕಿಟಿಕಿ ತೆರೆದಿಹರೇನು ನಾಲ್ಕು ಸುತ್ತ
ಉಸಿರು ಕಟ್ಟುತ್ತಿಹುದು ಸುತ್ತ-ಮುತ್ತ
ಬೆಳಕು ಚೆಲ್ಲುತಿದೆ ಪ್ರಖರ ಕಿರಣದಲಿ
ತುಂಬಿದೆಯೇಕೋ ಅಂಧಕಾರ ಮೈಮನದಲಿ
ಈ ನಡುವೆ ಎಲ್ಲಿ ಕಳಕೊಂಡಿರುವೆ ನಾ? ॥

ಏರು ಪೇರಾಗಿದೆ ನ್ಯಾಯ ತಕ್ಕಡಿಯ ಮುಳ್ಳು
ಸಾಬೀತಾಗಿ ರಸ್ತೆಗೆಸೆಯಲ್ಪಟ್ಟಿವೆ ಸುವಿಚಾರಗಳೆಂಬ ಸುಳ್ಳು
ಕೋಮು-ಗಲಭೆ ಹಾಹಾಕಾರದ ಆಲಿಕಲ್ಲಿನ ಮಳೆ ಉದುರುತ್ತಿವೆ
ಅಮಾಯಕರ ನೆತ್ತಿಗೆ ಬಿದ್ದು ರಕ್ತದ ಬಿಂದುಗಳು ಒಸರುತಿವೆ
ಈ ನಡುವೆ ಎಲ್ಲಿ ಕಳಕೊಂಡಿರುವೆ ನಾ ? ॥

ಗುಡಿಸಲೊಂದರಲಿ ಮಗು ಸಾಯುತಿದೆ
ಪೌಷ್ಟಿಕಾಂಶದ ಕೊರತೆಯಲಿ
ಅರಮನೆಯಲಿ ಹೆಣಗಳುರುಳುತಿವೆ
ಆಸ್ತಿ ಅಂತಸ್ತುಗಳ ವಿಚಾರದಲ್ಲಿ
ಈ ನಡುವೆ ಎಲ್ಲಿ ಕಳಕೊಂಡಿರುವೆ ನಾ? ॥

ಗುದ್ದಿ ಗುದ್ದಿ ಕುಗ್ಗಿಸಿಬಿಟ್ಟಿರುವಾಗ ಆ ಮಹನೀಯರು
ಬಗ್ಗಿ ಬಗ್ಗಿ ನೆಲಕ್ಕಂಟಿಕೊಂಡಿದ್ದಾರೆ ಈ ಅಮಾಯಕರು
ಕ್ರೋಧ-ಆಕ್ರೋಶದಲಿ ಮೂಲೆಗುಂಪಾಗುತ್ತಿವೆ ಸಂಬಂಧಗಳು
ಸ್ವಾರ್ಥ - ಅಹಂಕಾರದಲಿ ಮರೀಚಿಕೆಯಾಗುತ್ತಿವೆ ಅನುಬಂಧಗಳು
ಈ ನಡುವೆ ಎಲ್ಲಿ ಕಳಕೊಂಡಿರುವೆ ನಾ ? ॥

ಶಿಸ್ತು ಸಂಯಮದ ನಲ್ಮೆಯ ಬದುಕಿಗೆ
ಒಗ್ಗಿಕೊಂಡಿರುವಾಗ ತನು-ಮನ
ಬೆನ್ನುಹುರಿಗೆ ಇರಿದ ಚೂರಿಯ ನೋವಿಗೆ
ಕುಸಿಯುತ್ತಿದೆ ಜೀವ ದಿನೇದಿನೇ
ಈ ನಡುವೆ ಎಲ್ಲಿ ಕಳಕೊಂಡಿರುವೆ ನಾ ? ॥

★ ★ ★

*PAGE DONATED BY : **SHRI V. G. BHAT, NIGDI***

# Thinking of Risk before Return

✍ Vinod N. Bhat

**Trading Options - A High Risk Affair**

'Hi, It's so nice of you to come. Please come in,' Siddharth's wife Rashmi welcomed Renu and Anand to their home. They had come over for lunch on a Sunday.

After exchanging some pleasantries, they had animated discussions regarding the elections, IPL, their kids' education, and summer vacation plans.

Knowing that Siddharth was a financial advisor, Anand finally brought up one of his favourite topics which was the stock market.

'You know Siddharth, I have been investing in Mutual Funds and stocks for almost 5 years now. I started during Covid and fortunately my portfolio has done very well.'

'Excellent Anand. I am really happy to know that. The stock market has almost tripled from the Covid lows and many investors have made good profits. I am glad you are one of them.'

'Thanks. But I didn't stop there. I taught Renu also how to invest in stocks. She is a home maker and has some free time during the day. So, she has started trading stocks in my portfolio sitting at home now.'

'Oh really!' Siddharth took a deep breath.

'Yes, one of our neighbours is also a home maker and was trading stocks. So, I thought let me also give it a try,' Renu explained. 'Since Anand already knew about the stock market, it made things easier.'

'OK. So, how has been your experience so far?' Siddharth asked her.

'It's been great. I have managed to make profits consistently over the past year. So, we have shifted more money to our trading account,' Renu replied.

'And that's not all. She has also started trading options,' Anand added. 'One of my friends has been making good money doing that and he offered to teach us. Renu has been a quick learner and picked it up easily. She is much better than me at it.'

Siddharth's heart sank. He couldn't believe what he was hearing.

'You know that options trading is risky, right?' he asked them. 'You could lose your entire capital in a few minutes.'

'Yes, we know that,' Renu replied confidently. 'But I have been quite successful. Although I have some winning trades and some losing trades, overall I have made some profits over the past 4 months.'

'That may be true. But let me share some data with you,' Siddharth told them as he picked up the day's newspaper and showed them an article.



'Here, see this. Alpha Capital is in the news today. They are a global trading firm which made USD 1 billion in profits last year just based on their India options trading strategy. Who do you think would be the losers who took the opposite side of their trades?' he asked them.

Anand and Renu were befuddled.

'It's individual investors like you,' Siddharth explained. 'A recent SEBI study showed that 9 out of 10 traders in India have lost money.'

'Is it? We weren't aware of this,' Anand responded.

'And global studies have shown that only 1 in 100 traders makes profits. Actually, the odds of winning in a casino are higher than in trading.'

'But I have been making profits. So, I must be doing something right, isn't it?' Renu tried to defend herself.

'That's the problem,' Siddharth exclaimed. 'You may be successful at trading for some time with small amount of capital. It would make you think that you are the 1-in-100 trader who will be successful. That will make you over-confident and you will start betting bigger amounts. And end up losing your capital, which is especially easy to do when you trade options. The fact is that it's very difficult to make profits in trading consistently and over a long period of time.'

'So, is it only the Alpha Capitals of the world who are making money in trading?' Anand asked him.

'Look at it this way,' Siddharth explained. 'Alpha Capital has 3,000+ employees in 10 countries. They hire computer science graduates from IITs at crore+ salaries to write their trading algorithms, and they invest heavily in technology for high frequency trading. Do you think you as an individual investor can compete with them?'

'No way Siddharth. I would not want to take the opposite side of their trades,' Renu said with a shock. 'Most probably I will end up losing money.'

'Yes, we will be more careful in the future,' Anand added.

'I didn't mean to scare you guys with these sobering facts,' Siddharth replied. 'But I do want you to understand what you are getting into before it's too late.'

'Thanks Siddharth! We are glad we had this discussion,' Renu and Anand told him as they sat down for lunch.

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

*PAGE DONATED BY : **SHRI RAMANA BHAT MULUND AND FAMILY***

# HAVYAKA WELFARE TRUST MUMBAI

## ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ



# HAVYAKA WOMEN CONVENTION

## ಹವ್ಯಕ ಮಹಿಳಾ ಸಮಾವೇಶ

**Date : 16.6.2024, Sunday   Time : 10.00 a.m. onwards**

**Venue : HAVYAKARA SABHAGRAHA, Dipti Solitaire, 4th Floor, M. G. Road & L.B.S. Marg Junction, Opp. Old Post Office, Ghatkopar (W), Mumbai - 400 086.**

*Chief Guest / ಮುಖ್ಯ ಅತಿಥಿ :*

**Dr. Preeti Deshpande (Director, Ekopa Hospital and Karad Fertility Research Centre)**

ಡಾ. ಪ್ರೀತಿ ದೇಶಪಾಂಡೆ (ಇಕೋಪ ಹಾಸ್ಪಿಟಲ್ ಮತ್ತು ಕರಾಡ್ ಫರ್ಟಿಲಿಟಿ ರಿಸರ್ಚ್ ಸೆಂಟರ್‌ನ ನಿರ್ದೇಶಕರು)

*Chairperson / ಸಭಾಧ್ಯಕ್ಷರು :*

**Shri Shivkumar Bhagwat (President, Havyaka Welfare Trust)**

ಶ್ರೀ ಶಿವಕುಮಾರ್ ಭಾಗವತ್ (ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್)

*Special Guest / ವಿಶೇಷ ಅತಿಥಿ :*

**Dr. K.S. Pavitra (Psychiatrist, Writer, Classical Dancer)**

ಡಾ. ಕೆ. ಎಸ್. ಪವಿತ್ರ (ಮನೋವೈದ್ಯೆ, ಲೇಖಕಿ, ಭರತನಾಟ್ಯ ಕಲಾವಿದೆ)

**–: PROGRAMME DETAILS / ಕಾರ್ಯಕ್ರಮಗಳ ವಿವರ :–**

**9.30 a.m. to 10.00 a.m. / ಬೆಳಿಗ್ಗೆ 9.30 ರಿಂದ 10.00**

**Registration & Breakfast / ನೋಂದಣಿ ಮತ್ತು ಉಪಾಹಾರ**

**Stage Programme - ಸಭಾ ಕಾರ್ಯಕ್ರಮ**

**Presentation (Dance) by Dr. K. S. Pavitra / ನೃತ್ಯಮುಖೇನ ಪ್ರಸ್ತುತಿ ಡಾ. ಕೆ. ಎಸ್. ಪವಿತ್ರ ಅವರಿಂದ**

**Women's Mental Health/ ಮಹಿಳೆಯರ ಮಾನಸಿಕ ಆರೋಗ್ಯ**

**Felicitation of the Elderly Women and Special Achiever**

**ಹಿರಿಯ ಮಹಿಳೆಯರು ಮತ್ತು ವಿಶೇಷ ಸಾಧಕರಿಗೆ ಸನ್ಮಾನ**

**10.00 a.m. to 1.30 p.m. / ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.30 ರ ವರೆಗೆ**

**Lunch Break /1.30 p.m. to 2.30 p.m. / ಊಟದ ವಿರಾಮ ಮಧ್ಯಾಹ್ನ 1.30 ರಿಂದ 2.30**

**CULTURAL PROGRAMME - 2.30 p.m. onwards / ಸಾಂಸ್ಕೃತಿಕ ಕಾರ್ಯಕ್ರಮ –ಮಧ್ಯಾಹ್ನ 2.30 ರಿಂದ**

**Fancy Dress Competition for Women / ಮಹಿಳೆಯರಿಗಾಗಿ ಫ್ಯಾನ್ಸಿಡ್ರೆಸ್ ಸ್ಪರ್ಧೆ**

**(Time limit for Fancy Dress Competition is 1 to 1½ min)**

**(ಫ್ಯಾನ್ಸಿ ಡ್ರೆಸ್ ಸ್ಪರ್ಧೆಗೆ ಕೇವಲ ಒಂದರಿಂದ ಒಂದೂವರೆ ನಿಮಿಷದ ಕಾಲಾವಧಿ)**

**Skit-Light Comedy Skit with a message to the society is preferable (10-12 minutes)**

**ಲಘು ಹಾಸ್ಯದೊಂದಿಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಸ್ಕಿಟ್‌ಗೆ ವಿಶೇಷ ಆದ್ಯತೆ**

**Decorated Aarati Thaali competition / ಅಲಂಕೃತ ಆರತಿ ಬಟ್ಟಲು ಸ್ಪರ್ಧೆ**

***Hearty Welcome to all / ಎಲ್ಲರಿಗೂ ಆದರದ ಸ್ವಾಗತ***

***Those who are interested to participate in cultural programme & competitions and for more information please contact :***

**Shanta Bhat - 7208171617 · Amita Bhagwat - 9819324284 ·Tanuja Hegde - 8169515822 ·Shashikala Hegde - 9869015917 · Hema Hegde - 7715950112 ·Sumitra Bhat - 8459744395 · Shobha Bhat - 9821117715**

*PAGE DONATED BY : **SHRI G. V. HEGDE MULUND AND FAMILY***

# ಮಾಸ ಭವಿಷ್ಯ

✍ ಶ್ರೀಪತಿ ಭಟ್

**ಮೇಷ :** ವೈಯಕ್ತಿಕ ಮತ್ತು ವ್ಯವಹಾರಿಕವಾಗಿ ಬಾಕಿ ಇರುವ ಕೆಲಸಗಳನ್ನು ಪೂರ್ತಿಗೊಳಿಸುವ ಬಗ್ಗೆ ಹೆಚ್ಚಿನ ಗಮನಹರಿಸಿ. ಪರಿಸ್ಥಿತಿಯ ಮೇಲೆ ಹತೋಟಿ ಸಾಧಿಸಲು ಪ್ರಯತ್ನ ಪಡುವುದು ಒಳ್ಳೆಯದು. (ಅದೃಷ್ಟ ಸಂಖ್ಯೆ 7)

**ವೃಷಭ :** ಸಣ್ಣಮಟ್ಟದ ಗುತ್ತಿಗೆದಾರರಿಗೆ ಸರ್ಕಾರಿ ಕಾಮಗಾರಿಗಳು ದೊರೆಯುವ ಸಂಭವವಿದೆ. ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿ ಬರಲಿದೆ. ಇದರಿಂದಾಗಿ ಎಲ್ಲಾ ಕೆಲಸ ಸುಲಭವಾಗಿ ಪೂರೈಸುವಿರಿ. (ಅದೃಷ್ಟ ಸಂಖ್ಯೆ 3)

**ಮಿಥುನ :** ಕಠಿಣ ನಿರ್ಧಾರದಿಂದ ಹಿಂದಿನ ಕೆಲಸ ಕಾರ್ಯಗಳೆಲ್ಲವು ಪೂರ್ಣಗೊಳ್ಳಲಿದೆ. ವಿದ್ಯಾಪೇಕ್ಷಿಗಳು ಶ್ರದ್ಧೆಯಿಂದ ಸತತ ಪರಿಶ್ರಮ ಪಟ್ಟರೆ ಫಲವುಂಟು. ವೈದ್ಯವೃತ್ತಿಯವರಿಗೆ ವಿಶೇಷ ಲಾಭವಿದೆ. (ಅದೃಷ್ಟ ಸಂಖ್ಯೆ 5)

**ಕರ್ಕಾಟಕ :** ವಿದೇಶದಲ್ಲಿರುವ ಮಕ್ಕಳ ಅಥವಾ ಬಂಧು ಮಿತ್ರರ ಆಗಮನ ಮನಸ್ಸಿಗೆ ಸಂತೋಷಕೊಡುತ್ತದೆ. ತೆಗೆದುಕೊಂಡ ನಿರ್ಧಾರಗಳು ತಪ್ಪಾಗಿರುವ ಬಗ್ಗೆ ಅರಿವಾಗುವುದು. ನೀಲಿ ಬಣ್ಣ ಶುಭ ತರಲಿದೆ. (ಅದೃಷ್ಟ ಸಂಖ್ಯೆ 2)

**ಸಿಂಹ :** ಸೂಕ್ಷ್ಮ ವಿಚಾರಗಳಲ್ಲಿ ಬುದ್ಧಿವಂತಿಕೆಯ ನಿರ್ಣಯಗಳನ್ನು ಕೈಗೊಳ್ಳುವಿರಿ. ಜೀವನ ಸಂಗಾತಿಯ ಹುಡುಕಾಟದ ಬಗ್ಗೆ ಗಮನಿಸಿ. ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಸಮಯ ಒದಗಿ ಬರುವುದು. (ಅದೃಷ್ಟ ಸಂಖ್ಯೆ 8).

**ಕನ್ಯಾ :** ಆಕಸ್ಮಿಕವಾಗಿ ಪ್ರತಿಭೆ ಬೆಳಕಿಗೆ ಬರಲಿದೆ. ಕುತೂಹಲಕಾರಿ ವಿಷಯ ತಿಳಿದು ಅಚ್ಚರಿಗೊಳ್ಳುವಿರಿ. ಸಾಧ್ಯತೆಗಳನ್ನು ಅರಿತುಕೊಂಡು ವ್ಯವಹಾರದಲ್ಲಿ ಮುಂದುವರಿಯುವುದು ಉತ್ತಮ. (ಅದೃಷ್ಟ ಸಂಖ್ಯೆ 6)

**ತುಲಾ :** ನಾಳೆಯ ಯೋಜನೆಗಳಿಗೆ ಗಮನಕೊಡುವುದರಿಂದ ಕೆಲಸ ಪೂರ್ಣಗೊಳಿಸಲು ಸಹಾಯ ಮಾಡಲಿದೆ. ಹಿರಿಯರ ಆರೋಗ್ಯದ ಬಗೆಗೆ ಕಾಳಜಿ ವಹಿಸುವುದು ಅನಿವಾರ್ಯವಾಗುವುದು. (ಅದೃಷ್ಟ ಸಂಖ್ಯೆ 1)

**ವೃಶ್ಚಿಕ :** ಧಾರ್ಮಿಕ ವಿಚಾರಗಳಲ್ಲಿ ಸಾಧನೆ ಮಾಡುವವರಿಗೆ ಸುಸಮಯ. ವೃದ್ಧಾಶ್ರಮ ವಾಸಿಗಳಿಗೆ ಹೆಚ್ಚಿನ ಸಹಾಯ ಮತ್ತು ಸಿಹಿತಿನಿಸುಗಳು ಸಿಗಲಿದೆ. ರೈತರ ಬೆಳೆಗಳಿಗೆ ಉತ್ತಮ ಬೆಲೆ ದೊರೆಯುವ ಸಂಭವವಿದೆ. (ಅದೃಷ್ಟ ಸಂಖ್ಯೆ 4)

**ಧನು :** ಕಾಂಟ್ರಾಕ್ಟ್ ವ್ಯವಹಾರಸ್ಥರಿಗೆ ಸರ್ಕಾರದಿಂದ ಹೆಚ್ಚಿನ ಗುತ್ತಿಗೆ ಕೆಲಸಗಳನ್ನು ಪಡೆಯುವ ಮಹತ್ವಾಕಾಂಕ್ಷೆ ಉಂಟಾಗಲಿದೆ. ವಿರೋಧಿಗಳ ಮಧ್ಯದಲ್ಲೇ ವಾಸಸ್ಥಾನವಿದೆ ಎಂಬುದನ್ನು ಮರೆಯದಿರಿ. (ಅದೃಷ್ಟ ಸಂಖ್ಯೆ 9)

**ಮಕರ :** ಮದುವೆಗಾಗಿ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳುವ ಬಗ್ಗೆ ಯೋಚನೆಗಳು ಬರಲಿದೆ. ನಿಧಾನಗತಿಯಲ್ಲಿ ಸಾಗುತ್ತಿರುವ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಮೋಸದ ಬಲೆಗೆ ಬೀಳದಿರಿ. (ಅದೃಷ್ಟ ಸಂಖ್ಯೆ 3)



**ಕುಂಭ :** ತೆರಿಗೆ ಸಂಬಂಧಿ ಅಥವಾ ಲೇವಾದೇವಿ ನಡೆಸುವವರಿಗೆ ಉತ್ತಮ ದಿನ. ಕೆಲವು ವಿಚಾರಗಳಿಗೆ ಭಾವುಕರಾಗುವ ಸನ್ನಿವೇಶ ಎದುರಾಗುವುದು. ಕ್ರೀಡಾಪಟುಗಳಿಗೆ ಪ್ರಾಯೋಜಕರು ದೊರೆತು ಸಂತಸವಾಗುತ್ತದೆ. (ಶುಭ ಸಂಖ್ಯೆ 7).

**ಮೀನ :** ರಾಜಕೀಯ ವ್ಯಕ್ತಿಗಳು ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಹೆಚ್ಚಿನ ಅಧಿಕಾರವನ್ನು ಪಡೆದುಕೊಳ್ಳುವಲ್ಲಿ ಸಫಲರಾಗುವಿರಿ. ಕೆಲವು ಕಠಿಣ ಸನ್ನಿವೇಶಗಳು ಸಹಜ ಸ್ಥಿತಿಗೆ ಮರಳಲಿದ್ದು ಮನಸ್ಸು ನಿರಾಳವಾಗಲಿದೆ. (ಅದೃಷ್ಟ ಸಂಖ್ಯೆ 8)

(ಶ್ರೀ ಶ್ರೀಪತಿ ಭಟ್ ಆಚಾರ್ಯರು ಪೇಜಾವರ ಶ್ರೀಗಳ ಅಧೀನದಲ್ಲಿ ಅವರ ವಿದ್ಯಾಪೀಠ ಆಶ್ರಮದಲ್ಲಿ ಅಧ್ಯಯನ ಮುಗಿಸಿದ್ದಾರೆ. ಅವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ 20 ವರ್ಷಗಳ ಅನುಭವವಿದೆ. ವೇದ, ಉಪನಿಷತ್, ಜ್ಯೋತಿಷ್ಯದ ಪ್ರಕಾರಗಳನ್ನು ಚೆನ್ನಾಗಿ ಅಧ್ಯಯನ ಮಾಡಿ 20 ವರ್ಷಗಳ ಅನುಭವದಲ್ಲಿ ಬಡಬಗ್ಗರಿಗೆ ಸಹಾಯ ಮಾಡುತ್ತಾ ಇದ್ದಾರೆ. ಹನುಮಂತ ನಗರದ ಮಾರುತಿ ಸರ್ಕಲ್‌ನಲ್ಲಿ ಇರುವ ಬಲಮುರಿ ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾಗಿಯೂ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಸಂಪರ್ಕ ಸಂಖ್ಯೆ : 99000 00198)


UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

# ಸಂಕ್ಷಿಪ್ತ ಸುದ್ದಿಗಳು

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ; ನಲ್ವತ್ತಾರನೇ ವಾರ್ಷಿಕ ಸಂಭ್ರಮ, ನಿರಂಜನ ಶತಮಾನೋತ್ಸವ ಸಂಸ್ಮರಣೆ ಡಾ. ಜಿ. ಎನ್. ಉಪಾಧ್ಯ, ಕರ್ನೂರು ಮೋಹನ್ ರೈ, ಸುರೇಖಾ ಶೆಟ್ಟಿ ಅವರಿಗೆ ಪ್ರಶಸ್ತಿ ಪ್ರದಾನ




ಮುಂಬಯಿ ವಿಶ್ವವಿದ್ಯಾಲಯು ಕನ್ನಡ ವಿಭಾಗದ 46ನೇ ವಾರ್ಷಿಕ ಸಂಭ್ರಮ ಹಾಗೂ ನಿರಂಜನ ಶತಮಾನೋತ್ಸವ ಸಂಸ್ಮರಣೆ ಕಾರ್ಯಕ್ರಮವು ಎ. 13ರಂದು ಸಾಂತಾಕ್ರೂಜ್ ಪೂರ್ವದ ಮುಂಬಯಿ ವಿಶ್ವವಿದ್ಯಾಲಯದ ಕಲೀನಾ ಕ್ಯಾಂಪಸ್‌ನ ಜೆ. ಪಿ. ನಾಯಕ್ ಭವನದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಬಂಟರ ಸಂಘ ಮುಂಬಯಿ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಹಿರಿಯ ಪತ್ರಕರ್ತ ಚಂದ್ರಶೇಖರ ಪಾಲೆತ್ತಾಡಿ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯವು ಕಲ್ಬುರ್ಗಿ ಪ್ರಸಾರಾಂಗ ರಾಜ್ಯಮಟ್ಟದ ಪುಸ್ತಕ ಬಹುಮಾನ ಯೋಜನೆಯ ಪ್ರಯುಕ್ತ ನೀಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರ 'ಕನ್ನಡ  ಸಾಹಿತ್ಯಕ್ಕೆ ಡುಂಡಿರಾಜ್ ಕೊಡುಗೆ' ಕೃತಿಗೆ ಲಭಿಸಿದ್ದು, ಪ್ರಶಸ್ತಿಯನ್ನು ಡಾ. ಜಿ. ಎನ್. ಉಪಾಧ್ಯ ಅವರಿಗೆ ಅತಿಥಿಗಳು ಪ್ರದಾನಿಸಿ ಶುಭ ಹಾರೈಸಿದರು. ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಮಲ್ಲ ಪತ್ರಿಕೆಯ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ ಮತ್ತು ಮುಂಬಯಿ ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಅವರು ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರೂ ಆದ ಡಾ. ಜಿ. ಎನ್. ಉಪಾಧ್ಯ ಅವರ 'ಸಾಹಿತ್ಯ ಸಿದ್ಧಿ ಸಿರಿ ಸೇವೆಯ ಸಾಕಾರ- ಡಾ. ಸುಧಾಮೂರ್ತಿ', 'ರಸಋಷಿ ರಾಷ್ಟ್ರಕವಿ ಕುವೆಂಪು', ಕನ್ನಡ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ ವಿದ್ಯಾರಾಮಕೃಷ್ಣ ಅವರ ಅನುವಾದಿತ ಕೃತಿ 't ಫ್ರಮ್ ವರ್ಡ್ಸ್ ಟು ನೋಬಲ್ ಡೀಡ್ಸ್- ದಿ ಇನ್ಸ್ಪಾಯರಿಂಗ್ ಟೇಲ್ ಆಫ್ ಡಾ. ಸುಧಾ ಮೂರ್ತಿ' ಮತ್ತು ಸಂಶೋಧನ ವಿದ್ಯಾರ್ಥಿ ಕಲಾ ಭಾಗ್ವತ್ ಅವರ 'ಜಾಲಂದರ' ಕೃತಿಗಳನ್ನು; ಪ್ರವೀಣ್ ಭೋಜ ಶೆಟ್ಟಿಯವರು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ ವಿರಚಿತ 'ನನ್ನ ಇತ್ತೀಚೆಗಿನ ಓದು'  ಕೃತಿಯನ್ನು ಮತ್ತು ಡಾ. ಜಿ. ಎನ್. ಉಪಾಧ್ಯ ಅವರು ಕನ್ನಡ ವಿಭಾಗದ ಸ್ನಾತಕೋತ್ತರ ವಿದ್ಯಾರ್ಥಿ ಸವಿತಾ ಅರುಣ್ ಶೆಟ್ಟಿ ಅವರ 'ಬೆಳಕಿಂಡಿ- ಮಿತ್ರಾ ವೆಂಕಟ್ರಾಜ್ ಅವರ ಸಾಹಿತ್ಯ ಅವಲೋಕನ' ಕೃತಿಗಳನ್ನು ಲೋಕಾರ್ಪಣೆಗೈದರು.

ಸಾಧಕರಿಗೆ ಗೌರವ ಕಾರ್ಯಕ್ರಮದಲ್ಲಿ ಮುಂಬಯಿಯಲ್ಲಿ ಕಳೆದ ಅನೇಕ ವರ್ಷಗಳಿಂದ ಸಾಂಸ್ಕೃತಿಕ ಪರಿಚಾರಿಕೆಗೈಯುತ್ತಿರುವ ಕರ್ನೂರು ಮೋಹನ್ ರೈ ಅವರನ್ನು ಅತಿಥಿಗಳು ಶಾಲು, ವಿಶ್ವವಿದಾಲಯದ ಪದಕ, ಫಲಕ ಹಾಗೂ ಗ್ರಂಥ ಗೌರವದೊಂದಿಗೆ ಸನ್ಮಾನಿಸಿದರು.

ಡಾ. ಲೀಲಾ ಬಿ. ಅವರು ಕೊಡಮಾಡುವ ಶೋಧ ಸಿರಿ ಪ್ರಶಸ್ತಿಯನ್ನು ವಿಭಾಗದ ಪಿಎಚ್‌ಡಿ ವಿದ್ಯಾರ್ಥಿ ಸುರೇಖಾ ಶೆಟ್ಟಿ ಅವರಿಗೆ ನೀಡಿ ಗೌರವಿಸಲಾಯಿತು. ನಿರಂಜನರ ಶತಮಾನೋತ್ಸವದ ಅಂಗವಾಗಿ ನಡೆದ ಸಂಸ್ಮರಣೆಯಲ್ಲಿ ಅವರ ಸಾಹಿತ್ಯ ಸಾಧನೆಗಳನ್ನು ವಿಭಾಗದ ಎಂ. ಎ. ವಿದ್ಯಾರ್ಥಿ ನ್ಯಾಯವಾದಿ ಶೇಖರ್ ಶೆಟ್ಟಿ ಸ್ಮರಿಸಿದರು. ನಗರದ ಅನೇಕ ಗಣ್ಯರು, ಸಾಹಿತ್ಯಾಭಿಮಾನಿಗಳು, ವಿಭಾಗದ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಸಹಾಯಕ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಎಸ್. ಶೆಟ್ಟಿ ನಿರೂಪಿಸಿದರು. ವಿಭಾಗದ ವಿದ್ಯಾರ್ಥಿಗಳು ಸಹಕರಿಸಿದರು.

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to 'Havyaka Welfare Trust' qualify for tax deduction under section 80 (G).**

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

# HAVYAKA HELPING HAND - LOCALS FOR LOCALS

Purpose.

Any Emergiences and need support(Except financial)and anything about Mumbai Havyaka including Medical and Educational support.

| **Virar to Dahisar** | **Mobile Number** |
|---|---|
| Shashikala Hegde, Dahisar | 918779136582 |
| Rokesh Hegde, Dhaisar | 919869396480 |
| K. C. Hegde, Borivali | 919869074115 |
| U. T. Krishnamurthy, Vasai | 919158918555 |
| Tanuja Hegde, Borivali | 918169515822 |
| Prashant Bhat, Vasai | 919373686757 |

| **Borivli to Andheri** | **Mobile Number** |
|---|---|
| Sanjay Bhat, Andheri | 919869035267 |
| Prakash Bhat, Andheri | 919867215936 |
| K. S. Bhat, Andheri | 919821110142 |
| Tejas Hegde, Andheri | 918424011618 |
| Chidanand Bhagwat, Powai | 919004638908 |
| Narayan Akadas, Kandivali | 919821211894 |
| Shivram Marigoli | 919820130850 |
| Asha Marigoli | 919004034141 |
| Roopa Bhat, Kandivali Charkop | 919821297562 |
| Tanuja Bhat, Borivali | 919820125830 |
| Santosh Bhat, Charkop | 919819363402 |
| Usha Kodlekere | 919969832171 |
| Ishwari Bhat, Andheri | 919158064444 |
| Shanta Bhat, Kandivali | 917208171617 |

| **Vile Parle to Churchgate/Colaba** | **Mobile Number** |
|---|---|
| ShivKumar Bhagwat, Prabhadevi | 919820154378 |
| R. P. Hegde, Kalina | 919324205262 |
| Amita Bhagwat, Prabhadevi | 919819324284 |
| Anant Bhat, Bandra | 919829623091 |

| **Vashi to Panvel** | **Mobile Number** |
|---|---|
| Umesh Maskeri, Vashi | 919930178352 |
| S. V. Shastri, Panvel | 919322881656 |
| Bharati Hegde, Jui Nagar | 919137428330 |
| Dr. Kumar Bhat, Panvel | 918928689728 |
| Mahesh Hegde, Kharghar | 919096007396 |
| Chandrashekar Joshi, Khargar | 918879590011 |

| **Chembur to Kalwa-Airoli** | **Mobile Number** |
|---|---|
| Vishnu Bhagwat, Thane | 919819798245 |
| G. V. Hegde, Mulund | 919930156877 |
| Vasant Bhat, Thane | 919867307715 |
| R. V. Joshi, Thane | 918657587138 |
| Prakash Hegde, Thane | 919930982060 |
| Prakash Rao, Vikhroli | 919004689538 |
| Nagraj Bhat, Thane | 917506248599 |
| Ganesh Bhat, Mulund | 919969192325 |
| Ramana Bhat, Mulund | 919820158256 |
| Akshay Hegde, Chembur | 919920456216 |
| Vipin Bhat, Ghatkopar | 919869041186 |
| Praveen Rao, Thane | 919322694421 |

| **Dombivli and Beyond** | **Mobile Number** |
|---|---|
| N.R. Hegde, Dombivli | 919820332240 |
| Vighneshwar Gaonkar, Palava | 919481986517 |
| M. N. Markande, Dombivli | 919833615085 |
| N. K. Hegde, Dombivli | 918850797296 |
| Umesh Hegde, Dombivli | 918080868649 |
| D. V. Bhat, Dombivli | 919372339050 |
| Ramkrishna Chatra, Dombivli | 918850448009 |
| Hema Hegde, Dombivli | 917715950112 |
| S. G. Bhat, Badlapur | 919869713696 |
| G. V. Hegde, Dombivli | 919167434626 |
| Shivanand Bhat, Dombivli | 919819908248 |

*PAGE DONATED BY : **SHRI A. K. BHAT, CHITRIGI & FAMILY***

# HAVYAKA WELFARE TRUST (REGD.1964)

## INAUGURATION OF DIAMOND JUBILEE CELEBRATION

*In the Presence of Chief Guest*

**DR. SURESH RAO**

(President BSKB Association)

*Presided by-*

**ADVOCATE SHIVKUMAR BHAGWAT**

(President-HWT)

*Was held on 10 th March, 2024*

### The following plans and activities for the Diamond Jubilee, year were discussed.

- Have the great Celebration through the year ensuring higher participation by Havyaka Members.
- Connecting every family residing in Mumbai during the year by 31st March, 2025.
- Life Membership Drive- Additional 200 Members to be part of the Havyaka Family.
- Patrons Upgradation Drive - 100 members to be upgraded.
- Souvenir Release.
- Havyaka Helping Hand- Locals for locals. Teams to be formed in the various parts of the City.
- Fund Raising - Rs. 5 Cr. (Two years plan)- Various Activities including Education, Medical and for the long pending desire of having our own Havyaka Bhavan.

### Activities - Diamond Jubilee Celebration

- All our current Activities will continue to be organized and celebrated in bigger way adding diamond flavour in the celebration.
- Sports Day for the all the age groups having Indoor and Outdoor games- Tentatively 3rd Qtr 2024.
- Fund Raising Event in Mumbai - Intend to have in the second half of 2024.
- Mega Event in the last Quarter of 2024 or during the first Quarter of 2025.
- Souvenir Release.
- House to House visits.

### Havyaka Helping Hand - Locals for Locals

- Any Emergency and need support.
- For any information or need about Havyaka Mumbai to connect with Havyaka member or would like to connect with Havyaka professionals or specific support.
- Financial help is not part of this helping hand.
- This is voluntary service and can't be demanded as a right.

'Havyaka Sandesha' May 2024

RNI NO. MAHBIL / 2000 / 746
Postal Registration No. MCN/161
WPP License No. MR / Tech / WPP-130 / North

*Posted at Mumbai Patrika Channel Stg. Office Mumbai - 400 001*
Date of Publication : 1st of every month
REGISTERED NEWSPAPER
Date of Posting :
2nd, 3rd of every month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098.
**E-mail : havyakamumbai@hotmail.com**
**Visit : www.havyakamumbai.com**

Published by Vasant Bhat
Secretary Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

**To,**

## ನಿಧನ



ಶ್ರೀಮತಿ ರಾಜೇಶ್ವರಿ ವಿ. ಹೆಗಡೆ (46) ಇವರು ದಿನಾಂಕ 20/04/2024ರಂದು ಶನಿವಾರ ಇಹಲೋಕ ತ್ಯಜಿಸಿದರು. ಪತಿ ವಿಶ್ವನಾಥ ದೊಡ್ಮನೆ ಮಕ್ಕಳಾದ ಕುಮಾರಿ ಅನಘ ಹಾಗೂ ಸುಧುಘ ಅಲ್ಲದೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮಯೂರವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ಆಡಳಿತ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸುತ್ತಿದ್ದ ಅವರ "ಅಂತರಾಳ" ಕವನ ಸಂಕಲನ 2006 ರಲ್ಲಿ "ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ದತ್ತಿನಿಧಿ" ಪ್ರಕಾಶನದಡಿ ಬೆಳಕು ಕಂಡಿತ್ತು. ಮೂಲತಃ ಕುಂದಾಪುರ ಸನಿಹದ ಕಟೀಶ್ವರದವರಾದ ರಾಜೇಶ್ವರಿ ಅವರು ಮುಡಗೇರಿಯಲ್ಲಿ ಶಿಕ್ಷಣ ಪೂರೈಸಿದ್ದರು. ವಿವಾಹಾನಂತರ ಮುಂಬಯಿಯಲ್ಲಿ ನೆಲೆಸಿದ್ದರು. ಮೃತರ ಆತ್ಮಕ್ಕೆ ಸದ್ಗತಿ ದೊರೆಯಲಿ.

## Achievement



**Ashwin Bhagwat,** s/o. Smt. Kala and Shri Chidananda Bhagwat graduated from Chalmers University with M.Sc. in Mobility Engineering. He currently resides in Gothenburg, Swedan, where he is working for Volvo Company.

★ ★ ★



**Kum.Dravya** D/o. Smt. Renuka and Shri Nobin Hegde, Holanagadde secured 94.6% in PUC IInd year Exam (Karnataka Board) held in March 2024.

***We wish them all the best and bright future.***

## Congratulations



Received donation of Rs 5,000/- to Havyaka Welfare Trust Mumbai from Smt. Shailaja and Shri Shantaram K. Hegde Airoli on the happy occasion of the wedding of their daughter Chi.Sau. Shraddha with Chi. Raghavendra Bhat at Siddhivinayaka Temple, Goli, Sirsi on 18.02.2024.

***We Congratulate and wish the Newly Wedded couple Happy Married life and Bright future.***

## Congratulations



Havyaka Bhajana Mandali Dombivili won the consolation prize at Marathi Bhajan/ Abhang Competition at Ganesh Mandir Dombivili on 30th March 2024.